
Koravanj

ಕೊರವಂಜಿ



ಅಕ್ಟೋಬರ್ ೧೯೫

★

ಸಂಪಾದಕರು :

ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ರತ್ನ
ಶ್ರೀಮತಿ ದಿ. ಭಾರತಿ ಬಾಯಿ
ಶ್ರೀಮತಿ ಟಿ. ಸುನಂದಮ್ಮ—ಬೆಂಗಳೂರು
ಶ್ರೀಮತಿ ಸರೋಜಿನಿ ಆರೂರ್
ಶ್ರೀ|| ಕುಮಾರ್
ಶ್ರೀ|| ಕಾಮತ್
ಶ್ರೀ|| ರೇವಣ್ಣ
ಶ್ರೀ|| ಹೋ.ನಂ. ಪರಮೇಶ್ವರನ್
ಶ್ರೀಮತಿ ರುದ್ರಮ್ಮ, ಬಿ ಎ.
ಶ್ರೀ|| ರಾಮಚಂದ್ರ .
ಶ್ರೀ|| ಜಾನಕಿರಾಂ
ಶ್ರೀ|| "ರವೀಂದ್ರ"
ಶ್ರೀ|| ಬಚ್ಚ
ಶ್ರೀ|| ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

ಬಿಡಿ ಪ್ರತಿ:— ಕೇವಲ ನಾಲ್ಕಾಣೆ.

ನಿರೀಕ್ಷಿಸಿ !　　　　　　　　　　ನಿರೀಕ್ಷಿಸಿ !!

ಸುಖಸಂಪತ್ ಚಿತ್ರಪಟ, ಮೈಸೂರು

ಇವರ ಪೌರಾಣಿಕ ಸುಂದರ ಕನ್ನಡ ಚಿತ್ರ

ತಿಲೋತ್ತಮೆ (ಕನ್ನಡ)

(ಅತ್ಯಂತ ಸುಂದರಿಗಿಂತ ಎಳ್ಳಷ್ಟು ಮಿಗಿಲಾದ, ದೇವೇಂದ್ರನ ಅಪ್ಸರೆಯ ಕಥೆ)



ಭೂಮಿಕೆಯಲ್ಲಿ

ಜಯಶ್ರೀ, ಜಿ. ಆರ್. ಸ್ಯಾಂಡೋ, ವಿಶ್ವೇಶ್ವರಯ್ಯ, ಎಂ. ಎಸ್. ಸುಬ್ಬಯ್ಯ, ಸುರೇಂದ್ರನಾತ್ ಪಂಡಿತ್ ಮತ್ತು ಕಲಾವಿಶಾರದ ಕೊಟ್ಟೂರಪ್ಪ.

★

ನಿರ್ದೇಶನ:— ಆರ್. ಎಂ. ವೀರಭದ್ರಯ್ಯ

For Particulars contact.


SUKHSAMPATH CHITRAPAT

FILM PRODUCERS AND DISTRIBUTORS

ASOKA ROAD, MYSORE



Famous For Over Half a Century
RAJA AGARBATHI 2 Tolas
Mfrs: MANYAM & Co. Bangalore, 3
FOR
PERFUMERY
TOILETS
COSMETICS-SOAPS
Etc.
INSIST ON
RAJA
(TRADE MARK)
PRODUCTS


ಅಯ್ಯೋ ಪಾಪ!
ಆ ಬಡ ಹುಡುಗಿ ಮಲೇರಿಯಾ
ಹಿಡಿದು ಸಾಯುವಷ್ಟಾಗಿದ್ದಾಳೆ
'ಪಾಲುಡ್ರಿನ್' ಆ ವಿಪತ್ತು
ನನ್ನನ್ನು ಸೋಕದಂತೆ ಮಾಡಿದೆ
ದಿನವೆಲ್ಲಾ ಎಲುಬು ಮುರಿಯುವ ಮನೆಗೆಲಸ. ಅದರ ಜೊತೆ ಮಲೇರಿಯಾ ಜ್ವರ! ಪಾಪ! ಆ ಬಡ ಹುಡುಗಿ ನರಳಿ ಸಾಯುವ ಹಾಗಿದ್ದಾಳೆ. ಅದೆಕ್ಕವಳು ಏನು ಮಾಡುತ್ತಿದ್ದಾಳೋ ದೇವರೇ ಬಲ್ಲ. ಅವಳಿಗೆ ಕಾಯಿಲೆ, ಕಾಯಿಲೆ, ಕಾಯಿಲೆ; ಯಾವಾಗಲೂ ಕಾಯಿಲೆಯೇ! ಅವಳು ದಿನಕ್ಕೊಂದು ಮಾತ್ರೆಯಂತೆ ಪ್ರತಿ ದಿನವೂ 'ಪಾಲುಡ್ರಿನ್' ತೆಗೆದುಕೊಳ್ಳುತ್ತಾ ಬಂದರೆ, 3-4 ದಿನಗಳಲ್ಲೇ ಆ ಹಾಳು ಜ್ವರದಿಂದ ಅತಿ ಸುಲಭವಾಗಿ ಬಿಡುಗಡೆ ಹೊಂದಬಹುದು. ಅವಳನ್ನು ನೋಡಿ, ನಾನು ಹುಷಾರಾದೆ. ನನಗಂತೂ ಪ್ರತಿ ಭಾನುವಾರ ಊಟದ ನಂತರ ಒಂದೊಂದು 'ಪಾಲುಡ್ರಿನ್' ಮಾತ್ರೆಯನ್ನು ಸೇವಿಸುವುದು ರೂಢಿಯಾಗಿ ಬಿಟ್ಟಿದೆ. ನನ್ನ ಮನೆಯಲ್ಲಿ ಪ್ರತಿಯೊಬ್ಬರೂ ನನ್ನಂತೆಯೇ ಮಾಡಬೇಕೆಂದು ಕಟ್ಟುಪಾಡು ಮಾಡಿದ್ದೇನೆ. ಅದರಿಂದ ಮಲೇರಿಯಾ ನನ್ನ ಮನೆಯ ಹೊಸಲನ್ನೇ ಮೆಟ್ಟುವಂತಿಲ್ಲ.
ICI
ಪಾಲುಡ್ರಿನ್
ಟ್ರೇಡ್ ಮಾರ್ಕ್
ಮಲೇರಿಯಕ್ಕೆ ಅದ್ಭುತವಾದ ಸಿದ್ಧೌಷಧ
ಒಂದು ಮಾತ್ರೆ
ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ (ಇಂಡಿಯ) ಲಿಮಿಟೆಡ್

ಜನಾದರಣೀಯವಾಗಿ ಪ್ರದರ್ಶಿಸಲ್ಪಡುತ್ತಿದೆ.



ಗಣಪತಿ ಪಿಕ್ಚರ್ಸ್‌ರವರ—

ದೇವಕಿ (ತಮಿಳು)

ಜಾನಕಿ, ಮಾಧುರಿ, ಲಲಿತ-ಪದ್ಮಿನಿ, ರಾಗಿಣಿ, ಕಮಲ,
ಬಾಲಚಂದರ್ ಮುಂತಾದವರು.

★

ಬೆಂಗಳೂರು: ಸೂಪರ್ ಮತ್ತು ಶ್ರೀ ಟಾಕೀಸುಗಳಲ್ಲಿ

A TALLAM RELEASE

ಕೊರವಂಜಿ

ಸಂಪುಟ ೧೦ | ಅಕ್ಟೋಬರ್ ೧೯೫೧ | ಸಂಚಿಕೆ ೭

ಕುಹಕಿಡಿಗಳು

★ ★

ಹಳೇ ಕಾಗದದ ಬೆಲೆ ವಿಪರೀತವಾಗಿ ಏರಿದೆ. (ಸುದ್ದಿ)

—ರಿಸರ್ವ್ ಬ್ಯಾಂಕಿನಿಂದ ಕೊಡಲ್ಪಟ್ಟ ಕಾಗದದ ಬೆಲೆ ಮಾತ್ರ ಇಳಿದು ಹೋಗಿದೆಯಲ್ಲವೇ?

* * *

ಸುಂಕದಕಟ್ಟೆ ನೌಕರರಿಗೆ ತುಟ್ಟಿಭತ್ಯವನ್ನು ಐದು ರೂಪಾಯಿನಷ್ಟು ಹೆಚ್ಚಿಸಬೇಕು ಎಂದೊಬ್ಬರು ಸಲಹೆ ಮಾಡಿದ್ದಾರೆ.

—ಆಹಾ! ಸೂರ್ಯನಮಸ್ಕಾರ ಮಾಡುವಾಗ ಸೊಡಿಲು ಹಚ್ಚಿದಂತೆ!!

* * *

ಎರಡು ತಲೆ ಕರು ಒಂದು ಶೃಂಗೇರಿಯಲ್ಲಿ ಹುಟ್ಟಿತಂತೆ—

—ಚುನಾವಣೆ ಹೊತ್ತಿಗೆ ಇದೊಳ್ಳೇ ಮಾದರಿ ಅಲ್ಲವೇ?

* * *

ಶ್ರೀ ಟಾಂಡನ್ನರವರು ಕಾಂ. ಕಾ. ಸಮಿತಿಯಲ್ಲಿ ಉಳಿದುಕೊಂಡರು. ಆದರೆ ಅವರ ಪಟ್ಟ ಶಿಷ್ಯ ಶ್ರೀ ಡಿ. ಪಿ. ಮಿಶ್ರಾ ಅವರು ಎಲ್ಲದಕ್ಕೂ ರಾಜೀನಾಮೆ ಕೊಟ್ಟು, ಸರ್ವ ತಂತ್ರರಾಗಿ ಬೊಬ್ಬೆ ಇಡುತ್ತಿದ್ದಾರೆ.

—ಅದಕ್ಕೇ ಹೇಳೋದು. ಹುಡುಗೀಗಿಂತ ಗೊಲಸು ಗಡುಸು ಅಂತ.

ಶ್ರೀ ಮುನ್ಶಿಯವರು ರಾಜಕೀಯದಿಂದ ನಿವೃತ್ತರಾಗಿ, ಸಾಂಸ್ಕೃತಿಕ ಪ್ರಗತಿಗೆ ದುಡಿಯುವರಂತೆ—ಪಾಠ ಪ್ರವಚನ: ಪುಸ್ತಕ ಇತ್ಯಾದಿಗಳ ಸಹಾಯದಿಂದ.

—ಅಂದರೆ ಇಷ್ಟರಲ್ಲೇ ಟೆಕ್ಸ್ಟ್ ಬುಕ್ ಸಮಿತಿ ಅಧ್ಯಕ್ಷರಾಗಲೇ ಬೇಕು!! ಇಷ್ಟಸಿದ್ಧಿ ಪಡೆಯಬೇಕಾದರೆ—

* * *

ಮಳೇ ಬರಲಿ ಅಂತ ಪರ್ಜನ್ಯ ಹೋಮ—ಮಾಡಲು, ಭಾವೀಲಿ ಇದ್ದ ಎರಡು ಕೊಡ ನೀರನ್ನೂ ಮುಗಿಸಿಬಿಟ್ಟರು ನಮ್ಮ ಹಳ್ಳಿಯಲ್ಲಿ ಅಂತ ಹಳ್ಳಿಗ ರೊಬ್ಬರು ಪತ್ರ ಬರೆದಿದ್ದಾರೆ.

* * *

ಶ್ರೀ ಗ್ರಹಾಂರವರು ಜಿನೀವಾದಿಂದ ಬರೆದುಕಳಿಸಿದ ಕಾಶ್ಮೀರ ವರದಿಯಲ್ಲಿ "ಶೀಘ್ರದಲ್ಲೇ ಇನ್ನೊಬ್ಬರನ್ನು ಮಧ್ಯಸ್ತಿಕೆಗಾರರನ್ನಾಗಿ ಕಳಿಸಿ, ಅತನೂ ಸುಂದರ ಶ್ರೀನಗರದ ಪ್ರವಾಸಮಾಡಲಿ" ಎಂದು ಸೂಚಿಸಿಲ್ಲವಂತೆ.

* * *

ಈ ಸಾರಿ ದಸರಾ ಪ್ರವಾಸಕ್ಕೋಸ್ಕರ—ನನ್ನ ಸ್ನೇಹಿತರು ಪಡುತ್ತಿರೋ ಸಡಗರ ನೋಡಿದರೆ—ಅವರದೇನೋ ಮೆರವಣಿಗೆ ಎನ್ನಿಸುತ್ತದೆ.

* * *

ಪೂರ್ವಕಾಲದಲ್ಲಿ ಹಠಯೋಗವು, ಭಾರತದಲ್ಲಿ ಬಹಳ ಪ್ರವರ್ಧಮಾನ ದಲ್ಲಿತ್ತು. (ಪತ್ರಿಕೆ)

—ಏಕೆ? ಈಗಲೂ ಹಠದ ಪ್ರಯೋಗದಿಂದಲೇ ಪ್ರವರ್ಧಮಾನ ಅಲ್ಲವೇ?

* * *

ಶ್ರೀ ಮುದ್ಗಲ್ ಅವರ ವಿಚಾರ ನಡೆದದ್ದನ್ನು ಓದಿದವರಲ್ಲಿ ಹಲವಾರು ಜನ ಟೋಪಿ ತೆಗೆದು ತಲೆ ಕೆರೆದುಕೊಂಡರಂತೆ.

* * *

ಜಾರ್ಜ್ ಚಕ್ರವರ್ತಿಗಳ ಮೇಲೆ ಯಶಸ್ವಿಯಾಗಿ ಅಪರೇಷನ್ ಮಾಡಿದ ಡಾ|| ಪ್ರೈಸ್ ಥಾಮಸ್ ಅವರು, ಅಪಘಾತಕ್ಕೀಡಾದರಂತೆ.

—ಅಪರೇಷನ್ ಪಸಂದಾಯ್ತು.

ಆದರೆ ಆ ಡಾಕ್ಟರು ಪೆಟ್ಟುತಿಂದ, ಅಲ್ಲವೇ?

ಉರಿಗಾಳಿ

ಗಾಂಧಿಯ ಆತ್ಮ ಮತ್ತೆ ರಾಜಸ್ಥಾನದಲ್ಲಿ ಜನ್ಮವೆತ್ತಿದೆಯಂತೆ; ಮಗುವಿನಲ್ಲಿ ಮಹಾತ್ಮ್ಯ ಮೂಡುತ್ತಿದೆಯಂತೆ... ....ಗೋಡ್ಸೆಯ ಆತ್ಮ ಮತ್ತೆ ಜನ್ಮವೆತ್ತದೆ ಇರಲಿ, ಎಂಬುದೇ ನಮ್ಮ ಆಸೆ.

*　　　*　　　*

ಜಗತ್ ಶಾಂತಿ ಸ್ಥಾಪನೆಗೆ ಯಾವುದು ಉತ್ತಮವಾದ ಮಾರ್ಗ ಎಂಬ ವಿಷಯದ ಮೇಲೆ ಡಾಲ್ಮಿಯಾರವರು ಒಂದು ಲೇಖನ ಸ್ಪರ್ಧೆ ಏರ್ಪಡಿಸಿದಾರೆ. ಈಗ ನಡೆಯುತ್ತಿರುವ ಭಾಷಣ ಸ್ಪರ್ಧೆಯೇ ಸಾಕಾಗಿದೆ.

*　　　*　　　*

ಬ್ರಿಟಿಷ್ ದ್ವೀಪದ ಹಸುವೊಂದು ವರ್ಷವೊಂದಕ್ಕೆ 120 ಟನ್ ಹಾಲನ್ನು ಕೊಡುತ್ತಿದೆಯಂತೆ..... ಬೆಂಗಳೂರಿನಲ್ಲಿರುವ ಗೋಶಾಲೆಯೊಂದು ದಿನವೊಂದಕ್ಕೆ ಅಷ್ಟೇ ಹಾಲನ್ನು ಸಪ್ಲೈ ಮಾಡುತ್ತಿದೆಯಲ್ಲಾ.

*　　　*　　　*

ಪ್ರತಿ ಒಬ್ಬ ಭಾರತೀಯನಿಗೂ ಮೈತುಂಬ ಬಟ್ಟೆ, ಹೊಟ್ಟೆ ತುಂಬ ಎರಡು ಹೊತ್ತು ಊಟ, ಚೊಕ್ಕ ಮನೆ—ಇವನ್ನು ಒದಗಿಸುವುದೇ ನಮ್ಮ ಧ್ಯೇಯ (ಕೃಪಲಾನಿ) "ಎಲ್ಲರೂ ಕೇಳುವುದು ಬಟ್ಟೆಗಾಗಿ, ಗೇಣು ಹೊಟ್ಟೆಗಾಗಿ"

*　　　*　　　*

ರೇಡಿಯೋ ನಿಲಯಗಳ ಮೂಲಕ ನಾವು ಚುನಾವಣೆ ಪ್ರಚಾರ ಭಾಷಣಗಳನ್ನು ಪ್ರಸಾರಮಾಡುವುದಿಲ್ಲ. (ಸರ್ಕಾರ) ಏಕೆ? ಈಗ ಪ್ರಸಾರವಾಗುತ್ತಿರುವ ಹಳೇ ಹಾಡುಗಳ ಜೊತೆಗೆ ಅವರ ಹಳೇ ಹಾಡುಗಳನ್ನ ಸೇರಿಸಬಹುದಾಗಿತ್ತಲ್ಲಾ.

*　　　*　　　*

ಸಂಸ್ಥಾನದ ವಿದ್ಯಾರ್ಥಿಗಳನ್ನು ಚುನಾವಣೆ ಪ್ರಚಾರಕ್ಕಾಗಿ ಉಪಯೋಗಿಸಬೇಕಾಗಿರುವುದರಿಂದ, ಈ ವರ್ಷದ ಪರೀಕ್ಷೆಗಳನ್ನು ಮುಂದುವರಿಸಬೇಕೆಂದು ಪಕ್ಷನಾಯಕರು ಸೂಚನೆ ಇತ್ತಿರುವರಂತೆ... ... ಛೆ! ಮುಂದುವರಿಸಬೇಕೆಂದು ಕೇಳಿರಲಾರರು!

*　　　*　　　*

ನನ್ನ ಕೈಯಲ್ಲಿ ಅಧಿಕಾರ ಸೂತ್ರವಿದ್ದಿದ್ದರೆ, ನಾನು ಭಾಷಣಗಳಿಗೂ ರೇಷನ್ ಪದ್ಧತಿಯನ್ನು ಜಾರಿಗೆ ತರುತ್ತಿದ್ದೆ........ಆಗ, ಭಾಷಣಕಾರರೆಲ್ಲರೂ ಕಳ್ಳಮಾರ್ಕೆಟ್ ಚೌಕದಲ್ಲೇ ವೇದಿಕೆ ನಿರ್ಮಿಸಬೇಕಾಗುವುದು.

* * *

ಶಕ್ತಿಯುತವಾದ ವಿರೋಧಪಕ್ಷವಿಲ್ಲದಿದ್ದರೆ, ಯಾವ ಸಂಸ್ಥೆಯೂ ಸರಿಯಾಗಿ ನಡೆಯಲಾರದು........ಉತ್ತಮ ಅಧ್ಯಾಪಕರಿದ್ದರೂ, ವಿದ್ಯಾರ್ಥಿಗಳು ಅವರಿಗೆ ವಿರೋಧವಾಗಿಲ್ಲದಿದ್ದರೆ, ವಿದ್ಯಾಭ್ಯಾಸ ಚೆನ್ನಾಗಿ ನಡೆಯಲಾರದು.

* * *

"ದೀಪಾವಳಿ ಸಂಚಿಕೆಯಲ್ಲಿ, ನಾವು ಜಾಹಿರಾತುಗಳಷ್ಟೇ ಸ್ಫೂರ್ತಿದಾಯಕವಾದ ಸ್ವಾರಸ್ಯವಾದ, ಲೇಖನಗಳನ್ನು ಪ್ರಕಟಿಸಲಿಚ್ಛಿಸುತ್ತೇವೆ; ಆದರೆ, ಉತ್ತಮ ತರಹದ ಸಾಹಿತಿಗಳ ಸಹಾಯ ಅಷ್ಟಾಗಿ ಸಿಗುತ್ತಿಲ್ಲ" ಎಂದು ಒಬ್ಬರು ಪತ್ರಿಕಾಕರ್ತರು ಬರೆದಿದ್ದಾರೆ.

* * *

ಏನಾದರೂ ಕೆಲಸ ಕೊಡಿ, ಎಂದದ್ದಕ್ಕೆ, ಗಾಂಧಿಜಿ ನನಗೆ "ಡಂಗುರ ಹೊಡಿ, ಹೋಗು!" ಎಂದು ಹೇಳಿದರು. (ಮಹಾವೀರ ತ್ಯಾಗಿ) ಅದೊಂದು ಕೆಲಸವನ್ನು ಮಾತ್ರ ಮಾಡಬಲ್ಲ ನೂರಾರು ಜನಕ್ಕೆ ಗಾಂಧಿಜಿ ಇದೇ ರೀತಿ ಉಪದೇಶ ಮಾಡಿರುವ ಹಾಗೆ ಕಂಡುಬರುತ್ತಿದೆ.

* * *

"ನಿಧಾನವಾಗಿ ಬೆಲೆಗಳನ್ನು ಇಳಿಸಲಾಗುವುದು ಸರ್ಕಾರದ ಧೋರಣೆಯಾಗಿದೆ" (ಅರ್ಥ ಸಚಿವರು) ಏಕ್ ದಂ ಇಳಿದರೆ, ಪಾಪ, ಪ್ರಜೆಗಳ ಹೃದಯಕ್ರಿಯೆ ನಿಂತುಹೋದರೂ ಹೋಗಬಹುದಲ್ಲವೆ?

* * *

ಒಂದು ಪ್ರಾಯದ ಸಿಂಹ, ಮುದಿ ಹುಲಿಯ ಜತೆ ಜಗಳವಾಡಿ, ಸಾಯು ವಷ್ಟು ಪೆಟ್ಟುಮಾಡಿತಂತೆ.—

—-ರಾಜಕೀಯದಲ್ಲಿ ಹೀಗಾಗುಲ್ಲ ಅಲ್ಲವೇ?—

* * *

ಅಂದ ಹಾಗೇ. ಶೀತವಾತಾವರಣದ ನೀಲಗಿರಿಯಿಂದ ಸಿ. ಪಿ. ಅವರು, ಬಿಸಿಬಿಸಿಯಾದ ಮದರಾಸಿನಿಂದ ಆರ್ಕಾಟ್‌ರವರೂ, "ತಲೆಚ್ಚೋರ್" ಹೆಚ್ಚಾದ ಊರಿನಿಂದ ಮಥಾಯ್ ಅವರೂ, ಕೇಂದ್ರ ಪಾರ್ಲಿಮೆಂಟಿಗೆ ಸ್ಪರ್ಧಿಸಿದ್ದಾರಂತೆ.

ಕವಿತ್ರಿ ಗುಂಪಣಿ

"ಯಾರೇ ನೀನು? ನನ್ನ ಮಲ್ಲೀ ಮೂಗಿನಂಗೆ
ಮೂಗನ್ನಿಟ್ಟುಕೊಂಡು ಮೆರತಿ?"
"ಯಾರಾ ನೀನು? ನನ್ನ—ಯೆಣ್ಣಿಂಗಿಸನ್ ಇಂಗೆ
ನೀನು ತಾನು ಅಂತ ಕರಿತಿ?" .೧.

"ಮತ್ತೆ? ನನ್ನ ಮನೆ ಹೊಸಲ ದಾಟಿ, ನೀ
ಯಾರೆ? ಯಾರ ಮನೆ ಗರತಿ?"
"ಅತ್ತು ವರಸ ನನ್ನ ಮುತ್ತಿನ ಸಂಸಾರ!
ಅವ್ವಾ! ಎಷ್ಟು ಬ್ಯಾಗ ಮರತಿ!" .೨.

"ಏನೇ ಮಲ್ಲಿ ಇದು? ಹೊಸ ಅವತಾರ?
ಸರಟು ಸರಾಯಿನ ವೇಸ?"
"ಸರಟು ಅಲ್ಲ ಇದು; ಸರಾಯಿ ಅಲ್ಲ;
ನಮ್ದು ಪಂಜಾಬೀ ದೇಸ!" .೩.

"ಸರಟು ಅಲ್ಲ ಕಸ್ಸ; 'ಪಯ್ರನ್' ಅಂತಾರೆ—
ಕುಡತ ಇದಕ ಆ ಮಂದಿ!
ಇದಕೆ ಸರಾಯ್ಗೆ—'ಸುರುವಾಲ್' ಅಂತ್ತಾರೆ—
ಮತ್ತೆ 'ಗಾಗರ' ಅಂತಂದಿ!" .೪.

"ಹೊಲ್ಲಿ ಹೊದ್ದಂಗೇ ಎದೆಯ ಮ್ಯಾಗೆ ಇದು?"
"'ದಾವಣಿ' ಇದು, ಇದು 'ದುಪ್ಪಟ್ಟ'!"
"ಬಲಾ ಮಲ್ಲಿ! ನಿನ ಕನಡ ಮರತುಬಿಡು.
ಹೇಟು ಪಂಜಾಬನೇ! ಅಪ್ಪಟ್ಟ!" .೫.

"ಎಲ್ಲಿ? ತಿರುಗು ಮಲ್ಲಿ! ಎಲ ಎಲ ಹುಡುಗಿ!
ಎಲ್ಲಿಗ್ ಇಳಿಯುತ್ತೈತ್ ಎರಡು ಜಡೆ!

ಕಿಟಿಕಿ ಬೆಳಕಿನಾಗ್—ನೋಡುವ ಮಲ್ಲಿ—
    ಎಲ್ಲಿ? ಅತ್ತಾಗಿಂದ್ ಇತ್ತಾಗ್ ನಡೆ! .೬.

"ಕುಲುಕು ಬಳುಕು (ಯಮ್ಮ!) ಒನಪು ಒಯ್ಯಾರ—
    ಕನಡಿ ಯಿಂದಿನಿಂದ್ ಕಂಡಂಗೆ!
ಅಲೆಯಲೆ ಅಲೆಯಲೆ ತೇಲಿಬತ್ತದೇ—
    ಚೆಂದಾಗ್ ಒಪ್ಪತ್ತೈತೆ ನಿಂಗೆ! .೭.

"ಕಣ್ಣ ಕೆಣಕತಡೆ—ನೀ ಯೇನೇ ಯೋಳು—
    ಪಂಜಾಬಿ ಬಟ್ಟೆಯ ತರ ಬೇರೆ!
ಅವರಿಗ್ ಅವರದು—ನಮ್ಮದು ನಮಗೆ—
    ಗೋರವ—ಅಳ್ಳೀಪ್ಯಾಟೆ ಶೀರೆ! .೮.

"ಒಳಗೆ ಕುಬಸ, ಬೆನ್ ಮುಚ್ಚುವ ಸೆರಗು,
    ಮುಂದೇ—ನಿರಿಯ ಗಗನ ಚಿಕ್ಕಿ!
ಮಂಗಲಗೌರಿ ಮತ್ತೆ ಮೆರೆದು ಬಾ—
    ಚೆಲ್ಲು ವೇಷ ಇದ ಒಳಗಿಕ್ಕಿ! .೯.

"ಕಂಕುಳಡಿಗೆ ನಿನ ಸೆರಗು ಹಾಯುವಾ
    ಬಿಗುಪು—ಸಾಕು ಅದೆ ಜುಮು ಜುಮ್ಮು!
ಇಳಿದ ಸೆರಗುಮರೆ—ದುಂಡನ್ನ ತೋಳು—
    ರವಿಕೆ ರೇಕೆ ಅದೆ ನಿನ ಹೊಮ್ಮು! .೧೦.

"ಏನೆ ಮಲ್ಲಿ? ನಮ ಮಗ್ಗಲು ಮನೆಗೆ
    ಹೊಸದು ಪಂಜಾಬೀ ಸಂಸಾರ?
ಔದಃ ಅವಮ್ಮನ್ ಕ್ಯೋಳಿ ತಂದೆಯಾ—
    ಈ ಪೋಲ್ಕೀ? ಸರಟು? ಇಜಾರ? .೧೧.


"ನಿನ್ನ ಶೀರೆ ನೀ ಆಕೆಗ್ ಉಡೀಸು;
    ಇಂತದ—ಮಡಿಕ್ಕಬೇಡ ಸಾಲ.
ಅಕ್ಕಪಕ್ಕದೋರ್ ಅಕ್ಕಾತಂಗೀರಂಗ್
    ಇರ್ರೆಲಾ—ಕೆಟ್ಟೋಗೈತೆ ಕಾಲ. .೧೨.

ಮತ್ತೇ, ಮಲ್ಲಿ, ನಾ ಯಿಂಗೆ ಯೋಳಿದ್ದೆ
    ಮಾಡಿಕೋಬೇಡ ರೋಸ.

ಎಂತದಿರಲಿ ಬಟ್ಟೆ, ಇಲದೆ ಇರಲಿ—ಸ್ರೀ
ಏನೆ ಮಾಡು—ಅದು ಸಂತೋಸ. . ೧೩ .

"ಯಾಕೆ, ಮಲ್ಲಿ? ನಾನ್ ಏನೇಳಿದಿನೇ?
ನನ ಮೂತೀ ಯಾಕೆ ತಿವಿತಿ?
ಗಂಡುಬೀರಿ! ನಿನಗ್ ಎದುರು ಗುರಾಣಿ—
ಇದು ಒಂದೇ- ನನ್ನ ಕವಿತಿ!" . ೧೪ .

—(ರತ್ನ.)



ಬಹಿರಂಗ ಪತ್ರ
ಪ್ರಧಾನ ಸಚಿವರಿಗೆ

ಪೂಜ್ಯ ಪ್ರಧಾನ ಸಚಿವರೇ,

ನೀವಿಂದು ಸೊಂಟ ಕಟ್ಟಿ ಪಾರ್ಲಿಮೆಂಟನಲ್ಲಿ ನಿಂತು, 'ಹಿಂದೂ ಕೋಡ್ ಬಿಲ್' ಅನ್ನು ರಾಜ್ಯಾಂಗ ರೀತಿಯಾಗಿ ಕಾನೂನು ಮಾಡಲು ಪ್ರಯತ್ನಿಸುತ್ತಿದ್ದೀರಿ, ಅದರ ಪರವಾಗಿ. ಅದರ ಎದುರಾಗಿ ಹಲವಾರು ಜನರು ವಾದಿಸಿದ್ದಾರೆ. ಆದರೆ ಎಲ್ಲರೂ ಒಂದು ದೃಷ್ಟಿಯನ್ನು ಮರೆತಿದ್ದಾರೆ. ಅದನ್ನೇ ನಿಮ್ಮ ಅವಗಾಹನೆಗೆ ತರಲು ಬೇಡುತ್ತೇನೆ.

ನಾನು ನಮ್ಮ ತಂದೆಗೆ ಮೂರನೆ ಮಗಳು ನನ್ನ ಮದುವೆಯಾಗುವ ಹೊತ್ತಿಗೆ ಆತ ಕಣ್ಣುಮುಚ್ಚಿಕೊಂಡಿದ್ದ. ಏನೋ ಆಸೆ ತೋರಿಸಿ ಒಬ್ಬ ಮಾಸ್ತರಿಗೆ ನನ್ನನ್ನು ಮದುವೆ ಮಾಡಿಕೊಟ್ಟರು. ಮದುವೆಯಾಗಿ ಗಂಡನ ಮನೆಗೆ ಸೇರಿ ಮೂರು ವರ್ಷದಲ್ಲಿ "ಅಮ್ಮ" ಎದ್ದಿತು. ಮುಖವೆಲ್ಲಾ ಕಲೆಯಾಗಿ ಹೋಯ್ತು. ಇದ್ದ ಮೂರು ಮಕ್ಕಳನ್ನು ನೋಡಿಕೊಳ್ಳುವುದರಲ್ಲಿ ಮುಪ್ಪು ಬೇರೆ ಬಂತು. ಅಯ್ಯೋ! ನಮ್ಮಲ್ಲೂ ಘೋಷಾ ಪದ್ಧತಿ ಇರಬಾರದಾಗಿತ್ತೆ ಅಂತ ಎಷ್ಟೋಬಾರಿ ಕನ್ನಡಿ ಮುಂದೆ ಅನ್ನಿಸಿದೆ ನನಗೆ.

ಈಗೀಗ ನಮ್ಮ ಯಜಮಾನರಿಗೆ ಮನೆಪಾಠಗಳು ಹೆಚ್ಚಾಗಿ ಸ್ವಲ್ಪ ದುಡ್ಡು ಸೇರುತ್ತಾ ಇದೆ. ಅಲ್ಲದೆ ಜತೆ ಮಾಸ್ತರುಗಳಾಗಿ ವಿದ್ಯೆ ಓದಿದ, ಮದುವೆ ಇಲ್ಲದ ಧಡೂತಿ ಹೆಂಗಸು ಮೂರು ಜನ ನಮ್ಮ ಕೇರಿಗೆ ಬಂದಿದ್ದಾರೆ.

ನೀವೇನೋ ಅದೃಷ್ಟವಂತ ಹೆಂಗಸರಿಗೆ ಸ್ವಾತಂತ್ರ್ಯವೂ ಸಿಕ್ಕಲಿ. ಅವರೂ ಶ್ರೀಮಂತ ಗಂಡಸರಹಾಗೆ ಸರ್ವ ಸ್ವಾತಂತ್ರ ಅನುಭವಿಸಲಿ. ಅಂತ ಸದುದ್ದೇಶದಿಂದ ಇದಕ್ಕೆ ಕೈಹಾಕಿದ್ದೀರಿ! ದಿಟ!

ಆದರೆ ನನ್ನಂತಹ ನಿರುಪಾಯ ಹೆಂಗಸರೇ ನಮ್ಮ ದೇಶದಲ್ಲಿ ಹೆಚ್ಚು. ಈ ಕಾನೂನು ಜಾರಿಗೆ ಬಂದರೆ ಇದ್ದೊಬ್ಬ ಗಂಡನೂ ಜಾರಿ ಕೊಂಡುಬಿಡ್ತಾನೆ. ಆಮೇಲೆ ನಮ್ಮ ಪಾಡೇನು? ಮಕ್ಕಳಿಗಾದರೂ ಹೆಸರು ಹೇಳಲು ತಂದೆ ಇಲ್ಲದಿದ್ದರೆ ಹೇಗೆ?

ಇದನ್ನೆಲ್ಲಾ ತಾವು ಸೂಕ್ಷ್ಮವಾಗಿ, ವಿಶಾಲ ಹೃದಯದಿಂದ ಯೋಚಿಸಿ ವಿವಾಹ ವಿಚ್ಛೇದನ ಜಪ್ಪಯ್ಯಾ ಅಂದರೂ ಆಗದ ಹಾಗೆ ಕಾನೂನು ಮಾಡಿ ನಮ್ಮನ್ನೆಲ್ಲಾ ಕಾಪಾಡಿ ಎಂದು ದೈನ್ಯದಿಂದ ಬೇಡಿಕೊಳ್ಳುವ,

ನಿಮ್ಮ ಹಿತಾಕಾಂಕ್ಷಿ,
ದಿ. ಭಾರತಿ ಬಾಯಿ.

ಗೃಹನೈರ್ಮಲ್ಯ

ಮನೆಗೆ ಬರುವ ಹೊತ್ತಿಗೆ ಎಂದೂ ಇಲ್ಲದ ಮುಗುಳ್ನಗೆ ಮನದನ್ನೆಯ ಮೊಗದಲ್ಲಿ. ಏನೋ ಇದೆ ಸಮಾಚಾರ ಅಂದುಕೊಂಡೆ. ಸಿನೀಮಾಕ್ಕೆ ಪೀಠಿಕಾ ಪ್ರಮಾಣವೋ, ರಾತ್ರೀ ರೊಟ್ಟಿಗೆ ಅಪರೂಪದ ನಂಜಿಕೆ ತಯ್ಯಾರಿಯೋ ಅಂತ ಗುಣಾಕಾರ ಹಾಕುತ್ತಾ ಕೂತೆ, ಬಟ್ಟೆ ಬಿಚ್ಚಿ.

ಬಿಸಿ ಬಿಸಿ ಕಾಫಿ ದೋಸೆಯ ಹಾಜರಾತಿ ಆಯ್ತು. ನಗೆ ಮೊಗದ ನಲ್ಲೆ 'ಉಗುರಲ್ಲಿ ನೆಲವ ಕೆರೆಯುತ್ತ, ಸೆರಗ ಕೊನೆಯ ತಿರಚುತ್ತ, ನಯ ಮಾತಿನಲ್ಲಿ "ಎರಡ್ರೂಪಾಯಿ ಬೇಕಾಗಿತ್ತೂಂದ್ರೇ" ಅಂದಳು. ಇದೇನು ಬಂತು, ತನಗೇ ನಾಲ್ಕು ಗೊಂಬೆಗಳಾದರೂ ಗೊಂಬೇ ಹುಚ್ಚು ಬಿಡಲಿಲ್ಲವಲ್ಲಾ ಇವಳಿಗೆ ಅಂದುಕೊಂಡು, "ನವರಾತ್ರಿ ಗೊಂಬೇಗೋ" ಅಂದೆ ಗಡುಸಾಗಿ. "ಅಯ್ಯೋ ಅಲ್ಲಾಂದ್ರೆ, ಬೊಂಬೇ ಎಲ್ಲಿಡೋದು ಈ ಸಾರಿ ಈ ಮಾಚ್ಚಿ ಕಾಟದಲ್ಲಿ. ಎಲ್ಲಾ ಕಿತ್ತಿಡ್ತಾಳೆ;....ಒಂದು ಸ್ಪರ್ಧೇ ಏರ್ಪಡ್ಸಿದಾರೆ ಮಹಿಳಾ ಸಮಾಜದೋರು.... ಗೃಹ ನೈರ್ಮಲ್ಯಕ್ಕೆ....ಅದಕ್ಕೆ ನಾನೂ ಸ್ಪರ್ಧಿಸೋಣಾಂತ ಪ್ರವೇಶಧನ ಎರಡ್ರೂಪಾಯೀ........"

ಮರಳುವ ಕಾಫಿ ಕೈಲಿ ಹಿಡಿದಿರೋದೂ ಮರೆತುಹೋಯ್ತು ಇವಳ ಮಾತು ಕೇಳಿ! ಇವಳು ಗೃಹನೈರ್ಮಲ್ಯಕ್ಕೆ....ಸ್ಪರ್ಧೆಕಾರಳು....ಗೊ ಗೋ.... ಗೋವಿಂದ!....ಸಂಸಾರ ಹೂಡಿದ ಹತ್ತು ವರ್ಷದಿಂದ ಹಿಡಿ ಕಸ ಹೊರಕ್ಕೆ ಹಾಕಿದೋಳಲ್ಲ ಪ್ರಾಣಿ! ಅಂಗಳದಲ್ಲಿರುವ ಮುರುಕು ಬಕೆಟ್ಟುಗಳು, ವಡಕು ಬಿಂದಿಗೆಗಳು, ಉಗ್ರಾಣದ ಜೂಲು ಗೋಣೀಚೀಲ, ತೂತುಬಿದ್ದ ಪಾತ್ರೆ ರಾಶಿ, ಎಲ್ಲಿಗೆ ಹೋಗಬೇಕು? ನಡುಮನೆಯ ಈ ಗಾಜೊಡೆದ ಅಪ್ಪಾ ಅಮ್ಮಂದಿರ ಫೋಟೋದ್ವಯವೋ, ಮುರುಕು ಕುರ್ಚೀತ್ರಯವೋ, ನೆಲದ ಹರಕು ಜಮಖಾನವೋ! ಇವಳು 'ಲೋಧ್ರ' ಕುಡಿದ ಕಾಲದ (ಹಾರ್ಯರೇ, ಯಾಕಾದರೂ ಕುಡಿದಳೋ!) ಶೀಶಾ ಸಮೂಹ, ಹಳೇ ಜೋಡಿನ ಹುತ್ತ, ಹುಳು ಹಿಡಿದ ತೌಡು, ಹರಕು ಸೀರೆ ಜವಳಿ, ಮುರುಕು ಮಂದಾಸನ, ಗೂಡುಗಟ್ಟಿದ ನುಚ್ಚು, ಇತ್ಯಾದಿ, ಇತ್ಯಾದಿ ...! ಈ ಮನೆ....ಗೃಹನೈರ್ಮಲ್ಯಕ್ಕೆ....

"ನಾಳೆ ಸಂಜೆ ಬರುತ್ತಾರೆ ಪರೀಕ್ಷಕರು....ಇವತ್ತೇ ದುಡ್ಡು ಕಟ್ಟಿಬಿಡಬೇಕು...." ಸ್ವಲ್ಪ ಬಿರುಸಾಗೇ ಇತ್ತು ಧ್ವನಿ. ಇನ್ನು ಗುಡುಗು ಮಿಂಚಿಗ್ಯಾಕೆ ಅವಕಾಶ, ಹೋಗಲಿ ಮಹಿಳಾ ಸಮಾಜದೋರಿಗೊಂದು ಧರ್ಮಾರ್ಥ ಅಂತ

ಕಿಸೆಯಿಂದ ಎರಡು ರೂಪಾಯಿ ನೋಟು ತೆಗೆದು ಕೈಗಿಟ್ಟು ಹೊರಟು ಹೋದೆ. ಮಾರನೇದಿನ—ಎಂದಿನಂತಹ ಒಂದು ದಿನ ಅದು ನನಗೆ—ಹತ್ತು ಘಂಟೆ ಊಟ, ಕಛೇರಿ, ಸಂಜೆ ಲೋಕಲ್ ಕ್ಲಬ್ಬು (ಅರ್ಥಾತ್ ಪಾರ್ಕಿನ ಬೆಂಚು) ಮುಗಿಸಿಕೊಂಡು ರಾತ್ರಿ 8½ಗೆ ಮನೆಗೆ ಬಂದೆ. ಬಂದೇನೋ ಬಂದೆ....ಆದರೆ.... ಇದು ನಮ್ಮ ಮನೆಯೇ?....ಆ....? ನಗೆಮೊಗದವನಲ್ಲಿ ಹಿರಿಹಿಗ್ಗಿನಿಂದ ಹದಿನೈದು ರೂಪಾಯಿನ ಸ್ಟೈಯಿನ್‌ಲೆಸ್ ತಟ್ಟೆ ಮುಖಕ್ಕೆ ಹಿಡಿದಳು. "ನೋಡೀಂದ್ರೇ, ನನಗೆ ಪ್ರಥಮ ಬಹುಮಾನ!"

ಸ್ವಲ್ಪ ಸುಧಾರಿಸಿಕೊಂಡೆ. ಮನೆಯಲ್ಲಿ ಬಗ್ಗಿ ನೋಡಿದೆ. ನಡುಮನೆಯಲ್ಲಿ ನಯವಾದ ಕಿರು ಕಾರ್ಪೆಟ್ಟು, ಎರಡು ಬೆತ್ತದ ಕುರ್ಚಿ ವರಾಂಡದಲ್ಲಿ, ಗೋಡೆಯಮೇಲೆ 'ಎಳೆಯಾಗಸ ತಿಳಿ ಹೊಳೆ'ಯ ಪ್ರಕೃತಿ ಸೌಂದರ್ಯದ ಪಠಗಳೆರಡು. ಉಗ್ರಾಣದಲ್ಲಿ ಫಳಫಳನೆ ಹೊಳೆಯುತ್ತಿರುವ ಆರು ಅಲ್ಯೂಮಿನಿಯಂ ಭರಣಿಗಳು, ಹನ್ನೆರಡು ಹಿತ್ತಾಳೆ ಡಬ್ಬಿಗಳು! ಕೋಣೆಯಲ್ಲಿ ಕಿಚನಲ್ಲೂ, ಎಲ್ಲೆಡೆಯಲ್ಲೂ ಶುಭ್ರತೆಯ ರಾಜ್ಯ!

"ಎಲೆ ಎಲೇ, ಎಲ್ಲಿಂದ ಎರಗಿತೇ ಈ ಎಲ್ಲೆ ಮೀರಿದ ಪವಾಡ?" ಎಂದೆ ಪ್ರಾಸಬದ್ಧವಾಗಿ.

"ನೋಡಿ, ನಕ್ಕೊಳ್ತ ಇದ್ರಲ್ಲ ಒಳಗೊಳಗೇ ನಿನ್ನೆ" ಎಂದೆಗರಿಸಿದಳು ಮೂಗನ್ನ.

"ಒಪ್ಕೊಂಡೆ....ಅಲ್ವೇ ಗತವೈಭವದ ಕುರುಹುಗಳ ಮ್ಯೂಜಿಯಂ ಇದ್ಹಾಗಿತ್ತಲ್ಲ ನಮ್ಮ ಮನೆ, ಆ ಪರಂಪರೇನೆಲ್ಲ ಎಲ್ಲಿ ಗಡೀಪಾರು ಮಾಡ್ದೆ, ಯಾವಾಗ ಮಾಡ್ದೆ, ಹೇಗೆ ಮಾಡ್ದೆ....ಆ....?

"ಅಲ್ರೀ, ಈ ಬೆಂಗ್ಳೂರು ಪೇಟೇಲಿ ಮನೇ ಚೊಕ್ಕಟ ಮಾಡೋದೊಂದು ಕಷ್ಟವೇ! ಬೆಳಗ್ಗೆ ನೀವು ಹೋದಾಗಿನಿಂದ—ಹನ್ನೊಂದರಿಂದ ಐದರವರೆಗೆ ವರಾಂಡ ಬಿಟ್ಟು ಅಲುಗಲಿಲ್ಲ. ಐದರಿಂದ ಆರರವರೆಗೆ ಅಂಗಡೀವ್ಯಾಪಾರ, ಆರೂವರೆಗೆ ಈ ಅರಮನೆ ಧೂಳು ಹೊಡೆದು ಅರೇಂಜ್ ಮಾಡ್ದೆ. ಅಷ್ಟೊತ್ತಿಗೆ ಪರೀಕ್ಷಕರು ಬಂದ್ರು. ಗಿಟ್ಟಿತು....ಗೊತ್ತೇ ಇದೆಯಲ್ಲಾ?

"ಆ .. ವರಾಂಡಾದಲ್ಲಿ ಕೂತಿದ್ರೆ....ಮನೇಗಲೀಜು?...."

"ಅಯ್ಯೋ, ನಿಮ್ತಲೇಗೆ ಅಷ್ಟು ಸುಲಭವಾಗಿ ಹಿಡಿದೀತೇ! ನೋಡಿ. ಈ ತೌಡು ತೌಡೂಂತ ಕೂಗ್ತಾನಲ್ಲ, ಅವನ್ನ ಕೂಗ್ದೆ. ತೌಡು ನುಚ್ಚು ಕೊಟ್ಟೆ. ಆ ದುಡ್ನಲ್ಲೇ ಫುಟ್-ರಗ್ ತೆಗೆದದ್ದು. 'ಹಳೇ ಪೇಪರ್ ಖಾಲೀ ಸೀಸಾಯ್' ನೋನಿಗೆ ಆ ಸೀಸೆ ಸಾಲು, ಪುಸ್ತಕದ ಗುಡ್ಡೆ ಸಾಗಿಸ್ದೆ. ಆ ಅವಲಕ್ಷಣದ ಅತ್ತೇ ಮಾವಂದ್ರನ್ನೂ ಅವನ್ಗೇ ಗಂಟುಹಾಕ್ದೆ. ಗಾಜಿಗೆ

ಏನ್ಹೇಳೋಂತೀರಿ ಈ ಕಾಲದಲ್ಲಿ—ಆ ಬಾಪ್ರೇ ಆ ಎರಡು ಮುದ್ದಾದ ಪಠಗಳು. ‘ಹಳೇ ಪಿತ್ತಾಳೆ ಅಲ್ಯೂಮಿನಿಯಂ’ ಅಂತ ಬರ್ತಾನೆ, ಅವನ್ಗೆ ಮನೇಲಿದ್ದ ಪಡಕು ಪಡಕೆಲ್ಲ ಕೊಟ್ಬಿಟ್ಟೆ. 8 ಸೇರಿತ್ತು, ಎಂಟ್ರೂಪಾಯಿ ಬಂತು. ಆಕೋ ನೋಡಿ, ಆ ಜಂಖಾನ ಅದರಲ್ಲಿ ಕೊಂಡದ್ದೇ! ಮತ್ತೆ ಆ ಖಾಲಿ ಪೌಡರ್ ಡಬ್ಬ ದೋನುಬರ್ತಾನಲ್ಲ—ಅದರ್ತುಂಬ ಸೆಂಟ್ಹಚ್ಚಿದ ಸೀಮೇಸುಣ್ಣದ ಪುಡಿ ತುಂಬಿ ಪುನಃ ಮಾರುಕ್ಕೆ—ಅವನು ಆ ಪೌಡರ್ ಡಬ್ಬಿಗಳು, ಭರಣಿಗಳು ಅರ್ಧ ಮೂಟೆ ತುಂಬಿಕೊಡ್ತೋದ. ಉಗ್ರಾಣದ ಆರು ಹೊಸ ಡಬ್ಬಿ ಅದುಕ್ಕಿಂದೇನ್ನಿ. ಹೀಗೇ ಆ ಖಾಲೀ ಗೋಣೀಚೀಲ, ಹಳೇ ಜೋಡಿನ ರಾಶಿ ಎಲ್ಲ ವಿಲೇವಾರಿ ಮಾಡಿ ಬದಲು ಸಾಮಾನು ತಂದ್ಬಿಟ್ಟೆ.”

“ಅಬ್ಬಾ, ಘಾಟೀಕಣೇ ನೀನು!....ಅದ್ಸರಿ, ಆ ಮುರುಕಲು ಕುರ್ಚಿಗಳೇನಾದ್ವು, ಆ ನಿಮ್ಮಪ್ಪಕೊಟ್ಟಿದ್ದ ಒಂದೇ ಒಂದು ಫರ್ನಿಚರ್ರು”—ಹಾರ್ಮೋನಿಯಂ ಪೆಟ್ಗೆ—ಎಲ್ಲಿ ಹಾರಿಸ್ದೆ ?

“ಅಯ್ಯೋ ಅದೇನ್ಹೇಳ್ತೀರಿ! ಹೆಗಲ್ಮೇಲೆ ಕೊಡ್ಲಿಹಾಕೊಂಡು “ಸೌದೇ ಇದೆಯೇನ್ರಮ್ಮಣ್ಣಿ”ಂತ ಬಂದ ಒಬ್ಬ ದೊಣಪ. ಈ ಮೂರು ಕುರ್ಚೀನೂ, ಆ ಪೆಟ್ಗೇನೂ ಒಡ್ಸಿ ಅಣಿಯಾಗಿ ಅಟ್ಟಕ್ಕೆ ತುಂಬಿದ್ದೇನೆ. ನೂರೈವತ್ತು ಆಣಿ ಮೊಳೆಗಳು ಬಂದ್ವು ಅದ್ರಲ್ಲಿ—ಅದನ್ನೇ ಅವಕ್ಕೊಲಿಗೆ ಉತ್ತಾರ ಹಾಕ್ಬಿಟ್ಟೆ. ಹಾರ್ಮೋನಿಯಂ ಗೌಸು ಹೊಚ್ಚಿ ಮೂಲೇಲಿಟ್ಟಿದೀನಿ, ಮೇಲೊಂದು ಫ್ಲವರ್ ವೇಸ್ ಕೂರ್ಸಿ. ಪರೀಕ್ಷಕರು ರೇಡಿಯೋನೂ ಇದೆ. ನಮ್ಮನೇಲಿ ಅಂದ್ಕೊಂಡು ಹೋದ್ರು!........ಅಂದ್ಹಾಗೇ ಆ ರಿಟಾನ್ ಕುರ್ಚಿಗಳಿಗಿನ್ನೂ ಆರು ರೂಪಾಯಿ ಬಾಕಿ ಕೊಡ್ಬೇಕು. ನೀವೇ ಕೊಟ್ಬಿಡಿ, ಹೇಗಿದ್ರೂ ಎಂಟ್ರೂಪಾಯಿ ಸೌದೇ ತನಕ ಒದಗಿಸ್ಕೊಟ್ಟಿದೀನಿ!”

“ಓಹೋ, ಸ್ಯಾಂಕ್ಷನ್ಡ್, ಸಂಬಳ ಬಂದಕೂಡ್ಲೆ ಕೊಟ್ಟುಬಿಡ್ತೇನೆ” ಅಂದೆ ನನ್ನ ಚದುರಧರ್ಮಾಂಗಿಯ ಚಾತುರ್ಯಕ್ಕೆ ಮೆಚ್ಚಿ.

* * *

“ಹಾ ಮೇರೀ ಪ್ಯಾರೀ, ಘರ ಪ್ಯಾರಾ ಬನಾಯೀ, ಆವೋ ಮೇರಿ ಪ್ಯಾರೀ” ಎಂದು ಗುರುಗುತ್ತ ಕೋಣೆಯೊಳಕ್ಕೆ ಹೋದೆ ಒಟ್ಟೆ ಬಿಚ್ಚಿಹಾಕಲು. ಆ ಪರಿಶುದ್ಧ ಪ್ರಸರಿತ ಕೊಠಡಿಯಲ್ಲಿ ಹಾಳು ನನ್ನ ಏಕಮಾತ್ರ ಪಂಚೆ ಕಣ್ಣಿಗೆ ಬೀಳಲಿಲ್ಲ. “ನನ್ನ ಪಂಚೆ ಎಲ್ಲಿಟ್ಟೆ ಮಹರಾಯ್ತೀ” ಎಂದೂ ಕೂಗಿದೆ.

“ನಿಮ್ಮ ಪಂಚೆಯೇ,....ಅಂದ್ಹಾಗೆ ಮರ್ತೇಬಿಟ್ಟಿದ್ದೆಂದ್ರೆ ಹೇಳೋದು. ಹಳೇ ಪಾಗಿನ ಕಂಬಿಯೋನಿಗೆ ಹಂಕ್ಸೀರೆ ಬಟ್ಟೆ ಸಾಗ್ಸಿದ್ದಕ್ಕೆ ಹನ್ನೆರಡು ಪಿತ್ತಾಳೆ ಡಬ್ಬಿ ಬಂತೂಂದ್ರೆ. ನಿಮ್ಮಪಂಚೇನೂ ಹಾಕ್ಬಿಟ್ಟೆ .. ಹೋಗಿತ್ತೂಂದ್ರೆ ಅದೂ ಎರಡ್ರೂಮ್ಕಡೆ!”

—ಟಿ. ಸುನಂದಮ್ಮ—ಬೆಂಗ್ಳೂರು.

ಗಣೇಶನ್ನ ಕಂಡರೆ.......

ಆತ :— ನೋಡೆ !
ಗಣಪನ ಹೊಟ್ಟೆ ಕಂಡರೆ ನನಗೆ
ಮಾವನ ನೆನಪಾಗುತ್ತೆ—
ಇಲೀ ಮರೀನ ಕಂಡರೆ ಮಾತ್ರ
ಅತ್ತೆ ನೆನಪಾಗುತ್ತೆ—
ಕೈಯ್ಯೊಳಗಿರೋ ಮೋದಕ ಕಂಡರೆ ನಿನ್ನ ನೆನಪಾಗುತ್ತೆ—
ಬಾಯಲ್ಲಿ ನೀರೂರುತ್ತೆ !



ಅವನ ಕರವಸ್ತ್ರಾನೇ ಎಸೆದು ಎತ್ತು
ಕೊಡ್ತಾನೋ ಕಳಿಂಗ !

ಆಕೆ :—
ನನಗೋ........!
ಇಂಥಾ ಮಾತು ಕೇಳ್ತಾ ಇದ್ರೆ
ಗಣಪನ ಹೊಟ್ಟೆ ಸುತ್ಕೊಂಡಿರೊ
ಸರ್ಪನ ನೆನಪಾಗುತ್ತೆ—
ಮುಖದ್ಮೇಲೆ ನೀಡ್ಕೊಂಡಿರೊ
ದಾಡೆ ನೆನಪಾಗುತ್ತೆ—
ಆ ಮೇಲೆ ಆತನ ಕೈಯಲ್ಲಿರೋ
ಪಾಶಾಂಕುಶ ನೆನಪಾಗುತ್ತೆ—
ನನಗೂ ಬೇಕನಿಸುತ್ತೆ !

—ಸರೋಜಿನಿ ಆರೂರ್.

ವರ್ಗದ ಅರ್ಜಿ

"ಏನ್ರೀ ಇದು, ವರ್ಗ ಬೇಕು ಅಂತ ಅರ್ಜಿ ಬರೆದಿದ್ದೀರಿ?" ಎಂದು ಶುರು ಹಚ್ಚಿದರು ನಮ್ಮ ಹಾಯ್‌ಸ್ಕೂಲ್ ಹೆಡ್ಮಾಸ್ತರು. ಮಾತಿಗೆ ಶುರು ಮಾಡುವಾಗಲೇ ಹುಬ್ಬುಗಳೆರಡೂ ಮಧ್ಯೆ ಸೇರಿದುವು. ಹಣೆಯಲ್ಲೆಲ್ಲಾ ಸಾಲುನೆರಿ ಕಾಣಿಸಿಕೊಂಡವು. ಕೋಪದ ಚಿಹ್ನೆ ಮುಖದ ಮೇಲೆಲ್ಲಾ ತಾಂಡವವಾಡಿತು. "ಅಲ್ರೀ! ಇಲ್ಲಿಗೆ ನೀವು ಬಂದಾಗಿನಿಂದ ನನ್ನ ಮಗನನ್ನು ನೋಡಿಕೊಂಡ ಹಾಗೇ ನಿಮ್ಮನ್ನು ನೋಡಿಕೊಂಡಿಲ್ಲವೇ, ಅಂತಹುದರಲ್ಲಿ ಈಗ ಕೇಂದ್ರ ಕಛೇರಿಗೆ ವರ್ಗ ಬೇಕು ಅಂತ ಕೇಳ್ತೀರಲ್ಲಾ! ಇದು ನ್ಯಾಯವೇ? ದೇವರು ಒಪ್ಪುತ್ತಾನೆಯೇ?

"ಹಾಗಲ್ಲಾ! ಸಾರ್ ಈ ಶಾಲೆಯಲ್ಲಿ ಹುಡುಗರು."

ಗೊತ್ತ್ರೀ ಅದೆಲ್ಲಾ. ನಾನು ಈ ಶಾಲೆಗೆ ಮಾಸ್ತರಾಗಿ ಬಂದಾಗ ಇನ್ನೂ ಮೀಶೆ ಕೂಡ ಹುಟ್ಟಿತ್ತಿಲ್ಲ ತುಟಿಮೇಲೆ. ಪಂಚೆ ತುದಿಯಿಂದಲೇ ಬೋರ್ಡು ಅಳಿಸುತ್ತಾ ಇದ್ದೆ. ಚರಿತ್ರೆ ಭೂಗೋಳ, ಲೆಕ್ಕ, ಇಂಗ್ಲೀಷು, ಡ್ರಿಲ್ಲು ಇಷ್ಟೂ ನನ್ನ ಪಾಲಿಗೆ ಬಂದ ಪಂಚಾಮೃತಗಳು. ಇದೆಲ್ಲವನ್ನೂ ಮುಗಿಸಿ, ಆಗಿದ್ದ ಕರಾಚೂರಿ ಹೆಡ್ಮಾಸ್ತರ ಕೊಠಡಿಗೆ ಹೋಗಿ ಅಲ್ಲಿನ ಕಛೇರಿಯ ಕೆಲಸವನ್ನೆಲ್ಲಾ ಮಾಡುತ್ತಿದ್ದೆ. ಅದಕ್ಕೇ ಅವರು ರಿಟೈರ್ ಆದಾಗ ನನಗೆ ಆ ಪಟ್ಟಕಟ್ಟಿ ಕೂರಿಸಿದರು. ಏನೋ ಇದೇ ಊರಲ್ಲಿ ಮಾವನ ಮನೆ ಇತ್ತು. ಹತ್ತಿರಾನೇ ನಮ್ಮ ಜಮೀನು. ನಾನೂ ಕಾಲ ಹಾಕಿದೆ. ನನ್ನಲ್ಲಿ ಆತ ಇಟ್ಟ ವಿಶ್ವಾಸಾನಾ ನಾನು ನಿಮ್ಮಲ್ಲಿ ಇಟ್ಟು, ನಿಮ್ಮನ್ನ ಇಲ್ಲಿ ಕೂರಿಸೋಣ, ನನ್ನ ಕಾಲ ಬಂದಾಗ—ಅಂತ ಇದ್ದರೆ, ನೀವು ಹೀಗೆ ಅರ್ಜಿ ಹಾಕಿಕೊಂಡರೆ?

"ನಮ್ಮ ಮಾವ ಈ ಊರಲಿಲ್ಲ—-ಸಾ........"

"ಗೊತ್ರೀ! ಅದೆಲ್ಲಾ ಗೊತ್ರೀ! ನಿಮಗೆ ಮಾವ ಬದುಕಿಲ್ಲ ಅನ್ನೋದೂ ಗೊತ್ರೀ! ಅಂಥೋರು ಎಲ್ಲಿದ್ದರೆ ಏನ್ರಿ! ಇದೇ ನಿಮ್ಮ ಊರು ಅಂತ ಅಂದುಕೊಂಡು, ಜೀವನ ರಥ ಸಾಗಿಸೋದು ಬಿಟ್ಟು!

"ಅಲ್ಲಾ ಸಾರ್ ಹುಡುಗರು........"

"ಹುಡುಗರು ಯಾವ ಮಾಸ್ತರನ್ನು ತಾನೇ ಗೇಲಿ ಮಾಡುಲ್ಲ! ಅದರಲ್ಲೂ ಈ ಕುಳ್ಳದೇಹದವರನ್ನು ಕಂಡರೆ ಅವರನ್ನು ಕೆಣಕಿದ ಹಾಗೆ ಆಗುತ್ತೆ. ಅದನ್ನೆಲ್ಲಾ ಮನಸ್ಸಿಗೆ ತಂದುಕೊಳ್ಳುತ್ತಾರೆಯೇ? ನಿಮಗೆ ತೋಚಿದ್ದು ನೀವು ಹೇಳಿಕೊಡ್ತೀರಿ. ಅವರಿಗೆ ತೋಚಿದ್ದು ಅವರು ಅಂತಾರೆ. ಹೇಗೂ ಪರೀಕ್ಷೆ ಕಾಲಕ್ಕೆ ಇನ್ಸ್‌ಪೆಕ್ಟರೇ ಬಂದು ಎಲ್ಲವನ್ನೂ ಸರಿಮಾಡ್ತಾರಲ್ಲಾ! ಅದಕ್ಕೆ ರೇಗಿದರೆ ಆಗುತ್ತೇನ್ರಿ!

"ಅದಲ್ಲಾ ಸಾರ್, ನನ್ನ ಹುಡುಗರಿಗೆ ಈ ಊರಲ್ಲಿ........"

"ನಿಮ್ಮ ಹುಡುಗರಿಗೆ ಈ ಊರಲ್ಲಿ ಏನು ಗುನುಗು! ಇರುಕ್ಕೆ ಮನೆ ಇದೆ. ತಿನ್ನುಕ್ಕೆ ನೀವು ತಂದ್ಹಾಕ್ತೀರಿ. ಹಳ್ಳೀ ಮನೆ. ಅಂಗಳದಲ್ಲೀ ಚೇಪೇಕಾಯಿ ಮರ. ಶಾಲೇಲಿ ನೆಲ್ಲಿಕಾಯಿಗಿಡ—ಇನ್ನೇನ್ರಿ ಬೇಕು ನಿಮ್ಮ ಹುಡುಗರಿಗೆ.

"ಅಲ್ಲಾ ಸಾರ್! ಖಾಯಿಲೆ ಅವಕ್ಕೆ ಈ ಊರಿನ ಹವಾ ಅಂಟಲಿಲ್ಲ!"

"ಹುಡುಗರಿಗೆ ಹೆದರಿಕೊಂಡು ಊರುಬಿಟ್ಟು ಹೋಗ್ತೀರಲ್ಲಾ! ನೀವೆಂಥಹ ಧೀರರಪ್ಪಾ! ಹೋಗಲಿ ಬಿಡಿ. ನಾನೇನೋ ಅರ್ಜೀನ ಶಿಫಾರಸು ಮಾಡಿ ಮುಂದಕ್ಕೆ ಕಳಿಸ್ತೀನಿ. ಕೇಂದ್ರ ಕಛೇರಿಯ ಮ್ಯಾನೇಜರ್ ನನ್ನ ಹಳೇ ದೋಸ್ತು. ಅವನಿಗೂ ಹೇಳ್ತೀನಿ. ಆದರೆ ಅಲ್ಲಿಗೆ ವರ್ಗಾ ಆಗಿ ಹೋದಾಗ ನಮ್ಮ ಶಾಲೆಯಿಂದ ಬಂದ ಇಂಡೆಂಟ್‌ಗಳನ್ನೆಲ್ಲಾ ಬೇಗ ಸರಬರಾಜು ಮಾಡಿಸ್ತೀರಾ! ಬೋರ್ಡ್ ಚಾಕ್ ಇಲ್ಲದೆ ಮೂರು ತಿಂಗಳಾಯ್ತು. ಭೂಪಟಗಳ ಇಂಡೆಂಟ್ ಕಳಿಸಿ ನಾಲ್ಕು ವರುಷ ಆಯಿತು. ಈಗ ಆ ಭೂಪಟಗಳು ಬಂದರೂ ಪ್ರಯೋಜನವಿಲ್ಲ! ಭೂಪಟಗಳೇ ಮಾರ್ಪಾಡಾಗಿವೆ. ನೀವಾದರೂ ಬೇಗ ಬೇಗ ತ್ವರಿತಗೊಳಿಸಿದರೆ, ನಿಮ್ಮ ಉಪಕಾರ ನಾವು ಮರೆಯೋದಿಲ್ಲ."

"ಹೋಗಿ ಬನ್ನಿ. ಇನ್ನೇನ್ರಿ ಬೇಕು?"

ಅಂತ ರೇಗಿಕೊಂಡೇ. ನನ್ನ ಮಾತಾಡುಕ್ಕೆ ಬಿಡದೇನೇ ಹೊರದಬ್ಬಿದರು ಹೆಡ್ಮಾಸ್ತರು.

— ಕಾವಣಾರ್.

ಮಾಜಿ ಮಂತ್ರಿ

ಗೃಹ ಮಂತ್ರಿ, ಅರಣ್ಯ ಮಂತ್ರಿ, ಅರ್ಥಸಚಿವ,...... ಸಚಿವ. ಇತ್ಯಾದಿ ಈಗ ಅನೇಕರು ಆಸೇತು ಹಿಮಾಚಲ ಸಿಕ್ಕುತ್ತಿರುತ್ತಾರೆ. ಹಾಲಿ ಮಂತ್ರಿಗಳಾಗಿರುವವರು ಗುದ್ದಲಿ ಪೂಜೆ, ಪಿಕಾಸಿ ಪೂಜೆ, ಪ್ರಾರಂಭ ಭಾಷಣ, ಸಮಾಪ್ತಿ ಭಾಷಣ, ವಾರ್ಷಿಕೋತ್ಸವ, ಶತಮಾನೋತ್ಸವ, ಗಿಡ ನೆಡುವ ಸಮಾರಂಭ, ಮರ ಕಡಿಯುವ ಮುಕ್ತಾಯ, ಇತ್ಯಾದಿ ಚೇಷ್ಟೆಗಳನ್ನು ದಿನವೂ ಮಾಡುತ್ತಿರುವುದನ್ನು ನಾವು ನೋಡುತ್ತಿದೇವೆ. ಯಾವ ಪತ್ರಿಕೆ ತೆರೆದರೂ ಹಾಲಿ ಸಚಿವರ ಭಾವ ಚಿತ್ರಗಳೇ, ಯಾವ ಮಾಸಿಕೆ ತೆಗೆದರೂ ಇವರ ಸಂದೇಶಗಳೇ. ಯಾವ ಲೇಖನ ಓದಿದರೂ ಇವರನ್ನು ಕುರಿತ ಸಂದೇಶಗಳೇ. ಹುಡುಗರಿಗೆಲ್ಲ ಇವರೇ ಆದರ್ಶ; ತರುಣರಿಗೆಲ್ಲ ಇವರೇ ಉಪದೇಶಕರು; ಹಿರಿಯರಿಗೆಲ್ಲ ಇವರೇ ಟೀಕೆಗೆ ಗುರಿ.

ಇವರು ಮುನ್ನುಡಿ ಬರೆದರೆ, ಗ್ರಂಥ ಖರ್ಚಾಗುತ್ತದೆ; ಇವರು ಓಡಾಡಿದರೆ ರಸ್ತೆಗಳೆಲ್ಲ ರಿಪೇರಿ; ಇವರು ಕೈ ಹಿಡಿದರೆ, ಲಕ್ಷ್ಮಿ; ಇವರು ಕೈ ಎತ್ತಿದರೆ, ಜಯ; ಕೈ ಅಲ್ಲಾಡಿಸಿದರೆ, ಬಡತನ. ಹಾಲಿ ಮಂತ್ರಿಗಳೆಂದರೆ, ಅಷ್ಟು ಪ್ರಭಾವ. ಆದರೆ ಇಂಥವರು ನಾಳೆಯೋ ನಾಳದ್ದೋ ಬೇರೊಂದು ಬಗೆಯ ಮಂತ್ರಿಗಳಾಗುತ್ತಾರೆ, ಎಂಬುದನ್ನು ನಾವು ಈಗಲೇ ಅರಿತುಕೊಳ್ಳುವುದೊಳ್ಳೆಯದು.

ಹಾಲಿ ಮಂತ್ರಿಗಳೆಲ್ಲ ಮಾಜಿ ಮಂತ್ರಿಗಳಾಗಿಯೇ ಆಗುತ್ತಾರೆ. ಮಾಜಿ ಮಂತ್ರಿ ಎಂದರೆ, ಉಗುರಿಲ್ಲದ, ಹಲ್ಲಿಲ್ಲದ, ಗಂಟಲಿಗೆ ಗೂರಲು ಬಂದ ಸಿಂಹಗಳು; ಚಕ್ರವಿಲ್ಲದ ಗಾಡಿಗಳು, ಒಳತಂತಿ ಮುರಿದ ಬಲ್ಬುಗಳು, ಗಟ್ಟಿಲ್ಲದ ಬ್ಯಾಟುಗಳು, ಪೆಟ್ರೋಲಿಲ್ಲದ ಕಾರುಗಳು,............

ಮಾಜಿ ಮಂತ್ರಿಗಳನ್ನು ಯಾರೂ ಮಾತನಾಡಿಸುವುದಿಲ್ಲ; ಸತ್ಕಾರ ಕೂಟಗಳಿಗೆ ಅವರನ್ನು ಆಹ್ವಾನಿಸಲು ಜನ ಮರೆತರೂ ಮರೆಯಬಹುದು. ಅವರನ್ನು ಕಂಡಾಗ ಜನ ಅಡ್ಡದಾರಿ ಹಿಡಿದು ತೂರುತ್ತಾರೆ. ಅವರಿಂದ ಶಿಫಾರ್ಸ್ ಪತ್ರ ಒಬ್ಬರೂ ಬೇಡುವುದಿಲ್ಲ. ಅವರಿಗೆ ಅಳಿಯಂದಿರು ದೊರೆಯುವುದು ಕೂಡ ಕಷ್ಟ.

ಮಾಜಿ ಮಂತ್ರಿಗೆ ಮತ್ತೊಬ್ಬ ಮಾಜಿ ಮಂತ್ರಿಯೇ ಗಂಟು. ಅವರಿಬ್ಬರೂ ಸೇರಿ, ಕಾಲ ಕೆಟ್ಟುಹೋಯಿತು., ಆಡಳಿತ ಸಡಿಲವಾಯಿತು, ಬಿಗಿ ಬಿಚ್ಚಿತು, ನಾವು ಗೆದ್ದಿದ್ದರೆ ಇದ್ದಿದ್ದರೆ ....ಎಂದು ಮುಂತಾಗಿ ಮಾತನಾಡಿಕೊಳ್ಳುವರು.

ಅವರಿಗೆ ಪ್ರಪಂಚವೇ ಕತ್ತಲು ಕವಿದಂತಾಗುತ್ತದೆ....... ನಾಳೆಯೋ, ನಾಳದ್ದೋ........

—ಕಾಮತ್.

ಬ್ಲೇಡುಗಳು

ಬ್ಲೇಡುಗಳನ್ನು ತಯಾರಿಸುವ ಕಂಪನಿಯವರಿಗೆ ಅವುಗಳನ್ನು ನಾವು ಉಪಯೋಗಿಸುವ ವಿಧಾನವೇ ಗೊತ್ತಿಲ್ಲವೆಂದು ಹೇಳಬೇಕಾಗುತ್ತದೆ. ಬರಿಯ ಆಯುಷ್ಕರ್ಮಕ್ಕೆ ಮಾತ್ರ ಎಂದು ಅವರು ಜಾಹಿರಾತುಗಳಲ್ಲಿ ಜಂಬ ಕೊಚ್ಚಿ ಕೊಳ್ಳುತ್ತಿದಾರೆ. ಆದರೆ, ಹತ್ತಾರುಸಲ ಕ್ಷೌರ ಕರ್ಮ ಮುಗಿದನಂತರ, ಅವುಗಳ ಗತಿ ಏನಾಗುತ್ತದೆ, ಎಂದು ಅವರು ಸಂಶೋಧನೆ ನಡೆಯಿಸಿ, ಮೊದ ಮೊದಲು ವಪನಕ್ಕೂ ಅನಂತರ ಇತರೇ ನೂರಾರು ಕೆಲಸ ಕಾರ್ಯಗಳಿಗೂ ತಮ್ಮ ಬ್ಲೇಡುಗಳು ಅನುಕೂಲಿಸುವುದು ಎಂದು ಅವರು ಏಕೆ ಪ್ರಕಟಿಸಬಾರದು?

ನಮ್ಮ ಮನೆ ಹುಡುಗರು ನನ್ನ ವಪನ ಸಾಮಗ್ರಿಯನ್ನು ದಿನವೂ ಹುಡುಕಿ ಹಳೆಯ ಬ್ಲೇಡುಗಳನ್ನು ಲಪಟಾಯಿಸುತ್ತಿರುತ್ತಾರೆ. ಅವರಿಗೆ ಹಳೆಯ ಬ್ಲೇಡು ಗಳನ್ನು ಒದಗಿಸುವ ಸಲುವಾಗಿಯೇ ನಾನು ಹೊಸ ಬ್ಲೇಡುಗಳನ್ನು ಕಟ್ಟು ಕಟ್ಟಾಗಿ ಕೊಂಡು ಕೊಳ್ಳುವುದುಂಟು. ಪೆನ್‌ಸಿಲ್‌ನ್ನು ಚೂಪುಮಾಡಲು ಬ್ಲೇಡಿ ನಷ್ಟು ಸುಲಭವಾದ ಯಂತ್ರ ಬೇರೊಂದಿಲ್ಲವಂತೆ. ಹಾಗೆಯೇ ಶಾಲೆಯ ವಾಚನಾಲಯದ ಮಾಸಿಕೆಗಳಿಂದ ಸಿನಿಮ ತಾರೆಗಳ ಚಿತ್ರಗಳನ್ನು ಹರಿದು ತೆಗೆಯಲು ನಮ್ಮ ಹುಡುಗರು ಅದನ್ನು ಅಳವಡಿಸಿಕೊಂಡಿದ್ದಾರೆ. ಕಾಗದಗಳ ಮೇಲಿಂದ ದೂರ ದೇಶದ ಸ್ಟಾಂಪುಗಳನ್ನು ಕೀಳುವುದಕ್ಕೆ, ಉಗುರು ಕತ್ತರಿಸು ವುದಕ್ಕೆ, ಮಾಸ್ತರ ಕುರ್ಚಿಯ ಬೆತ್ತದಾಸನವನ್ನು ಸುತ್ತಲೂ ಹರಿದು ಅವರನ್ನು ಬೀಳಿಸುವುದಕ್ಕೆ, ಡೆಸ್ಕಿನ ಮೇಲೆ ವಿದ್ಯಾರ್ಥಿನಿಯರ ಮೇಲಿನ ಕವನಗಳನ್ನು ಕೊರೆಯುವುದಕ್ಕೆ, ತಮ್ಮ ಹೆಸರುಗಳನ್ನು ಮುದ್ರಿಸುವುದಕ್ಕೆ, ಸಣ್ಣ ಪುಟ್ಟ ಶಸ್ತ್ರ ಚಿಕಿತ್ಸೆಗಳಿಗೆ,—ಎಲ್ಲಕ್ಕೂ ಹಳೆ ಬ್ಲೇಡು ಸಮಯ ಸಂಜೀವಿನಿ. ನಮ್ಮ ಮನೆ ಹುಡುಗರ ಪ್ರತಿಯೊಂದು ಪಠ್ಯ ಪುಸ್ತಕದಲ್ಲೂ, ಹಾಳೆಗಳ ನಡುವೆ, ಒಂದು ಬ್ಲೇಡು ಇದ್ದೇ ಇರುತ್ತದೆ. ದೊಡ್ಡವನ ಪುಸ್ತಕದಲ್ಲಿ ಇಲೆಕ್ಷನ್ ಚೀಟಿ ಯೊಂದಿಗೆ ಅದು ಕೂತಿರುತ್ತದೆ; ಸಣ್ಣವನ ಪುಸ್ತಕದಲ್ಲಿ ನವಿಲುಗರಿಯೊಂದಿಗೆ ಅದು ಮಿರುಗುತ್ತದೆ. ನಡುವೆ ಮುರಿದು ಅರ್ಧ ತುಂಡಾದರೂ ಅದನ್ನು ಅವರು ಪರಿಪಾಲಿಸಿ ಜೋಪಾನವಾಗಿ ಇಟ್ಟುಕೊಳ್ಳುವರು ಅದಕ್ಕಾಗಿ ಅವರಿಗೂ ಅವರ ಸ್ನೇಹಿತರಿಗೂ ಆಗುವ ಜಗಳಗಳೆಷ್ಟು? ಬ್ಲೇಡುಗಳ ಸಾಲ,

ವಸೂಲಿ, ಶೇಖರಣೆ, ವಿತರಣೆ, ವಿನಿಮಯ, ಇವು ಅವರಿಗೆ ಅರ್ಥ ಶಾಸ್ತ್ರದ ಮೊದಲನೆಯ ಪಾಠ, ಅವೇ ಅವರಿಗೆ ಯಂತ್ರ ಯುಗಕ್ಕೆ ಮೊದಲ ಸೋಪಾನ.

ನಮ್ಮ ಮನೆಯಲ್ಲೂ ಅಷ್ಟೆ ಟಪಾಲಿನವನು ತಂದ ರೆಜಿಸ್ಟರ್ಡ್ ಪಾರ್ಸಲ್‌ನ ಗಂಟನ್ನು ಬಿಡಿಸಲು ಮನೆಯವರೆಲ್ಲ ಮೂರುಗಂಟೆ ಒದ್ದಾಡಿದ ಮೇಲೆ, ಮನೆಯಾಕೆ ಎಲ್ಲಿಂದಲೋ ಬ್ಲೇಡೊಂದನ್ನು ತಂದು, ಗಾರ್ಡಿಯನ್ ಗಂಟನ್ನು ಸಿಕಂದರ ಬಿಡಿಸಿದಂತೆ, ಕುಯ್ದು ಖುಷಿಯಾಗುವಳು. ಹೂಮಾಲೆಯನ್ನು ದೇವರಿಗೆ ಅರ್ಪಿಸಲು ತಕ್ಕಂತೆ ನಾರನ್ನು ಕತ್ತರಿಸುವುದಕ್ಕೆ ಅಜ್ಜಿಗೊದಗುವ ಆಯುಧವೂ ಬ್ಲೇಡೇ. ಹಳೆಯ ಬ್ಲೇಡಿಗೆ ವೈಲಿಗೆ ನಾಸ್ತಿ, ಎಂದು ನಾವು ಆಕೆಗೆ ಆಗಲೇ ಬೋಧೆ ಮಾಡಿದ್ದೇವೆ. ಎರಡು ಕಡೆಯೂ ಹರಿತವಾಗಿರುವ ಬ್ಲೇಡಿಗಿಂತ ಆಕೆಗೆ ಒಂದೇ ಕಡೆ ಚೂಪಾಗಿರುವ ಬ್ಲೇಡೇ ಅಪಾಯ ಕಡಮೆ; ಆದ್ದರಿಂದ, ನಾನು ಅಂಥದ್ದನ್ನೇ ಈಗ ಕೊಂಡುಕೊಳ್ಳಲು ಪ್ರಾರಂಭಿಸಿದೇನೆ.


ಫೋಟೋಗಳಿಗೆ ಕಟ್ಟು ಹಾಕುವ ಕುಶಲ ಕೆಲಸದವನಿಗೂ ಹಳೆಯ ಬ್ಲೇಡು ಅತ್ಯವಶ್ಯಕ. ಪೊಟ್ಟಣಗಳನ್ನು ಕಟ್ಟಿಕೊಡಬೇಕಾದ ಕುಂಕುಮದಂಗಡಿಯವನೂ ಕೂಡ, ಗಳಿಗೆಗಳಿಗೆಗೂ ದಾರ ಕುಯ್ಯುವುದಕ್ಕೆ ಬ್ಲೇಡನ್ನೇ ಶರಣುಹೋಗುತ್ತಾನೆ. ಏಕೆ? ಮೊನ್ನೆ, ನಮ್ಮ ಮನೆ ಎಮ್ಮೆ, ಗೂಟದ ಸುತ್ತ ಬಳಸಿ ಬಳಸಿ, ಹಗ್ಗವನ್ನು ಬಿಗಿಯಾಗಿ ಗಂಟಿಕ್ಕಿಕೊಂಡದ್ದರಿಂದ, ಅದರ ಹಗ್ಗವನ್ನು ಕುಯ್ದು ಅದನ್ನು ಬಿಡಿಸುವುದಕ್ಕೂ ನಾನು ನಾಲ್ಕು ಗಂಟೆ ಕಾಲ ಒಂದು ಬ್ಲೇಡನ್ನೇ ಗರಗಸವಾಗಿ ಉಪಯೋಗಿಸಿ, ಕೊನೆಗೂ ಜಯಭೇರಿ ಹೊಡೆದೆ. ಇಲೆಕ್ಟ್ರಿಕ್ ರಿಪೇರಿಯವರಿಗಂತೂ ಬ್ಲೇಡು, ಚಿಂತಾಮಣಿ. ಎರಡು ವಯರುಗಳನ್ನು ಸೇರಿಸಿ, ವಿದ್ಯುದ್ವಾಹಿನಿಯನ್ನು ಉದ್ದಕ್ಕೂ ಹರಿಸಬೇಕಾಗಿ ಬರುವಾಗಲೆಲ್ಲ, ಆ ವಯರುಗಳೊಳಗಿನ ತಾಮ್ರದ ತಂತಿಗಳನ್ನು ಜೋಡಿಸಲು ಬ್ಲೇಡಿನ ಸಹಾಯ ಅತ್ಯಗತ್ಯ. ಆಫೀಸ್ ರೂಂ ಗುಮಾಸ್ತೆಯರ ಕಿಸೆಯಲ್ಲಿ, ಬಸ್ ಕಂಡಕ್ಟರುಗಳ ಖಾಕಿ ಅಂಗಿಗಳಲ್ಲಿ, ಸೈಕಲ್ ಸವಾರರ ಇಜಾರದಲ್ಲಿ, ಅಂಚೆಯವನ ಚೀಲದಲ್ಲಿ, ಸುಂಕದ ಕಟ್ಟೆ ಮುತ್ಸದ್ದಿ ಕಿವಿಯಲ್ಲಿ—ಎಲ್ಲೆಡೆ ಹಳೆ ಬ್ಲೇಡುಗಳು ರಾರಾಜಿಸುತ್ತವೆ, ಒಂದಲ್ಲೊಂದು ದಿನ ಉಪಯೋಗಕ್ಕೆ ಬರುತ್ತವೆ. ಏನಿಲ್ಲ ಅಂದರೂ, ಆಪತ್ಕಾಲದ ವಪನಕ್ಕಾದರೂ ಒದಗುತ್ತವೆ; ಆತ್ಮಹತ್ಯೆಗೂ ಕೂಡ ಅದನ್ನುಪಯೋಗಿಸಿ ಸಫಲ ಹೊಂದಿದವರೂ ಇದ್ದಾರೆ.

ತಸ್ಕರ ಕಾರ್ಯಕ್ಕೆ ಬ್ಲೇಡುಗಳು ಬಹಳ ಸಹಕಾರಿಯಂತೆ. ಕಿಸೆ ಹರಕರ ಸಂಖ್ಯೆ ಹೆಚ್ಚಲು ಬ್ಲೇಡುಗಳು ಸುಲಭವಾಗಿರುವುದೇ ಕಾರಣ. ಸಿನಿಮಾ ಥೇಟ

ರುಗಳಲ್ಲಿನ ಪೀಠಗಳ ಮೇಲಿನ ನಯವಾದ ಬಟ್ಟೆಗಳನ್ನೂ, ಎರಡನೆ ತರಗತಿ ರೈಲು ಡಬ್ಬಿಗಳಲ್ಲಿ ಸ್ವಿಚ್ ಇತ್ಯಾದಿಗಳನ್ನೂ ಕದಿಯುವ ದೊಡ್ಡ ಮನುಷ್ಯರೆಲ್ಲ ಬ್ಲೇಡಿಗೆ ಶರಣುಹೋಗುತ್ತಾರೆ.

ಇಷ್ಟು ವ್ಯಾಪಕವಾಗಿ ಜನಪ್ರಿಯವಾಗಿ ಸಮಯೋಚಿತ ಸಾಮಗ್ರಿಯಾಗಿ ಯಾಗಿರುವ ಬ್ಲೇಡನ್ನು, ನುಣ್ಣಗಿನ ಕೊನೆಯೊಂದರಿಂದ ಮಾತ್ರ, ಜಾಹಿರಾತು ಪಡಿಸಿ ಜನರ ಮುಂದಿಡುವುದು, ಕೇವಲ ಅನುಚಿತ. ಇನ್ನಾದರೂ ಬ್ಲೇಡ್ ತಯಾರಕರು ಅದರ ನಾನಾ ಉಪಯೋಗಗಳ ಕಡೆ ಗಮನಕೊಟ್ಟು ಪ್ರಚಾರ ಪದ್ಧತಿಯನ್ನು ತಿದ್ದಿಕೊಳ್ಳಲಾರರೆ?

—ರೇವಣ್ಣ.



ತಾಯಿ:—ವಯಸ್ಸಿಗೆ ಬಂದ ಮಗನಿಗೆ, ನಿಮ್ಮಪ್ಪ ಬಿಟ್ಟುಹೋದ ಆಸ್ತಿಯೆಲ್ಲಾ ಇದೊಂದೇ ಕಣಪ್ಪಾ. ಜೋಪಾನವಾಗಿಟ್ಟುಕೊಂಡು ಬದುಕಿ ಬಾಳಿಕೋಪ್ಪಾ—

ಚುನಾವಣೆ ಸಮಯ ಬಂತು.

ಆ ಭಾರ


ಆವ ಮಂಕಿಗೆ ಸೋತು ನೀ ಕೆತ್ತಿಯೊ ಕಾಣೆ
ವೋಟಿನಾ, ನಿನ್ನ ಘನ ಚೀಟಿಯನು ಎನಗೆ—॥

ಜಿಲ್ಲೆಯವ ನಾನೆಂಬ ಮಮತೆಯಿಂದಿತ್ತೆಯೊ
ಬೆಲ್ಲದಂತಹ ಮಾತೆ? ಹಣವೆ?
ಇಲ್ಲಿನ್ನು ಮಹಿಮಾನ್ವಿತರು ಎನಿಸಿತೆ? ದಡ್ಡಮನ
ಎಲ್ಲ ಸಿರಿ ನನಗೆಂದು ನಿನಗುಸುರಿತೆ?........ಆವ ಮಂ ॥

ದೋಷಿ ದುರ್ಬಲನು ಬಲು ಕಳ್ಳನಿವನೆಂದು
ದ್ವೇಷಿಯೆಂಬುದು ನಿನಗೆ ತಿಳಿಯಲಿಲ್ಲೆ ?
ಭಾಷಣವು 'ಲೌ ಜನ್ಯ,' ವೇಷ ಭೂಷಗಳೆಲ್ಲ
ದೇಶಸೇವಕಚಿಹ್ನೆ........ಮೋಸಹೋದಿ! ....ಆವ ಮಂ ॥

ಒಂದು ದಿನ ನಾ ನಿನಗೆ ಕರುಬಿದವನಲ್ಲ
ಒಂದು ದಿನ ಒಪ್ಪತ್ತು ಉಪವಾಸ ಬೀಳೆ;
ಬಂಧುನಾ ನೆಂತಿದ್ದೆ, ನಾ ಬೇರೆ ಜಾತಿ!
ಅಂಥ, ನೀ, ಕರುಣಿಸಿದೆ........ಕಬಳ ನನಗೆ........ಆವ ಮಂ ॥

—ಕಾಮತ್.



"ಮುಂದುಗಡೆ ಕಂಪಾರ್ಟ್‌ಮೆಂಟಿನಲ್ಲಿ ಕೂತುಕೊಳ್ಳೋಣಪ್ಪಾ!—
ಊರಿಗೆ ಬೇಗ ಹೋಗಿ ಸೇರಬಹುದು!"

ನೀತಿಯ ಕತೆಗಳು

(ಬಲಿತವರಿಗೆ)

ಒಂದು ಊರಿನ ಹತ್ತಿರ ಒಂದು ಕಾಡು ಇತ್ತಂತೆ. ಆ ಕಾಡಿನಲ್ಲಿ ಒಂದು ಕಾಡುಬೆಕ್ಕು, ಒಂದು ನರಿ, ನೀರು ಕುಡಿಯುಕ್ಕೆ ಅಂತ ಹತ್ತಿರ ಇದ್ದ ಕೆರೆ ಯಂಚಿನಲ್ಲಿ ಸೇರಿದುವಂತೆ. ಆಗ ನರಿ ಕೇಳ್ತಂತೆ, "ಎಲೆ ಬೆಕ್ಕೆ! ಈಗ ಯಾರಾ ದರೂ ಶತ್ರುಗಳು ಬಂದರೆ ತಪ್ಪಿಸಿಕೊಳ್ಳಲು ಏನು ಮಾಡ್ತಿ" ಅಂತ. ಬೆಕ್ಕು ಹೇಳಿತಂತೆ, "ನನಗೊಂದೇ ಉಪಾಯ ಗೊತ್ತು. ಮರ ಹತ್ತಿ ಅವಿತು ಕೊಳ್ಳೋದು" ಅಂತ. ಆಗ ನರಿ ಹೇಳ್ತಂತೆ, "ಅಯ್ಯೋ! ಪೆಚ್ಚೆ! ನನಗೆ ನೂರು ಉಪಾಯ ಬರುತ್ತೆ. ಬಂದ ಶತ್ರು ನೋಡಿಕೊಂಡು, ತಲೆ ಮರೆಸಿಕೊಳ್ಳೋದು, ಸುಳ್ಳು ಹೇಳೋದು, ಲಂಚ ಕೊಡೋದು, ಬೆದರಿಸಿ ನೋಡೋದು, ಟೋಪಿ ತೋರಿಸೋದು, ಏನು ಮಾಡಿದ್ದೀನಿ ಅನ್ನೋದು, ಬಡವಾ ನಾನು! ಮದುವೆಗೆ ನೆರೆದ ಮಗಳಿದ್ದಾಳೆ—ನನ್ನನ್ನು ಕಾಪಾಡಯ್ಯಾ! ಅನ್ನೋದು, ನಾನು ಸನ್ಯಾಸಿ ಅನ್ನೋದು, ಹೀಗೆಲ್ಲಾ ಬೇಕಾದಷ್ಟು ಉಪಾಯ ಮಡಗಿದ್ದೀನಿ. ನಿಂಗೂ ಒಂದೆರಡು ಹೇಳಿಕೊಡಲೇ" ಅಂತ.

ಬೆಕ್ಕಿಗೆ ಬಾಲವೆಲ್ಲಾ ಜಂಭ. ಈ ಪಾಪದ ಕತೆ ಕೇಳಿತ್ತು. ಮಾತೆ ತಿರುವುಕೊಂಡು ಹೇಳಿತಂತೆ ನರೀಗೆ. "ನನಗೊಂದೇ ಉಪಾಯ ಸಾಕು" ಅಂತ.

ಅಷ್ಟು ಹೊತ್ತಿಗೆ ಹತ್ತಿರ ಏನೋ ವಾಸನೆ ಬಂತು. ನರಿ ಓಡಿ ಹತ್ತಿರ ಇದ್ದ ದೊಡ್ಡ ಮರದ ಪೊಟ್ಟರೆಯಲ್ಲಿ ಅವಿತುಕೊಂಡಿತು. ಬೆಕ್ಕು ಓಡಿಹೋಗಿ ಮರ ಹತ್ತಿತು.

ಆ ವಾಸನೆ ಬಂದಿದ್ದು ಚಿರತೆಯಿಂದ. ಅದಕ್ಕೋ ಹಸಿವು ಅಂದರೆ ಹಸಿವು. ಏನಾದರೂ ಸಿಕ್ಕರೆ ಸಾಕು ಅಂತ ಷಿಕಾರಿಗೆ ಬಂದಿತ್ತು. ಏನೂ ಇಲ್ಲದೆ ಇದ್ದರೆ ನೀರಾದರೂ ಕುಡಿಯೋಣ ಅಂತ ಬಂದಿತ್ತು. ಈ ಕಾಡು ಬೆಕ್ಕು ಮರದ ಮೇಲೆ ಕಾಣಿಸಿತು. ಬೇಗ ಮರ ಹತ್ತಿ ಅದನ್ನು ತಿಂದು, ಕೆಳಗಿಳಿದು ನೀರು ಕುಡಿದು ಹೊರಟೇ ಹೋಯಿತು.

ಆಗ ಧೈರ್ಯವಾಗಿ ನರಿ ಹೊರಕ್ಕೆಬಂದು "ನಾನು ಹೇಳಿದ್ದನ್ನು ಕೇಳಿ ದ್ದರೆ ಬೆಕ್ಕೂ ಬದುಕಿರಬಹುದಾಗಿತ್ತು. ಅಪ್ಪ, ಅಪ್ಪನ ಅಪ್ಪ ಹೇಳಿಕೊಟ್ಟ ಉಪಾಯ ಸಾಕು ಎಂದು, ಅಪ್ಪನ ಗತೀನೇ ಕಂಡಿತು" ಎಂದು ಹೇಳಿತು.

ನೀತಿ :— ತಂಟೆಗೆ ಸಿಗಬೇಡ—ಶಮ್ಮಾ—
ಸಿಕ್ಕಿದ್ದು ಬಿಡದೆ ಕಲಿತುಕೋ!

ಸಮಾಜ ಸೇವೆ

★

ನಮ್ಮ ಭಾರತ ದೇಶ ಇಂದು ಅನೇಕ ಉತ್ಕಟ ಪರಿಸ್ಥಿತಿಗಳನ್ನು ಎದುರಿಸಬೇಕಾಗಿದೆ. ಈ ಸಮಯದಲ್ಲಿ ಸರ್ವರೂ ಕಾರ್ಯೋನ್ಮುಖರಾಗಬೇಕಾದುದು ಅತ್ಯಗತ್ಯ. ಆದರಲ್ಲೂ, ಜಾಣತನದಲ್ಲಿ ಜಫರುಲ್ಲಾಖಾನರನ್ನು ಮೀರಿಸುವ, ನನ್ನಂಥ ನಾಲ್ಕೈದು ವಾಚಾಳಿಗಳಾದರೂ ತಮ್ಮ ಕರ್ತವ್ಯವನ್ನು ಅರಿಯಬೇಕು; ತಮ್ಮ ವಿಚಾರಪೂರಿತ ಭಾಷಣಗಳಿಂದ ಕೀರ್ತಿಧ್ವಜವನ್ನು ಎತ್ತಿ ಹಿಡಿಯಬಹುದು.

ಭಾಷಣಗಳಿಂದ ಸಮಾಜ ಸೇವೆ ಸಲ್ಲಿಸಲು ಸಾಧ್ಯವಿಲ್ಲವೆಂಬ ಮಾತನ್ನು ನಾನು ಕಟುವಾಗಿ ಟೀಕಿಸುತ್ತೇನೆ. ಹಾಗೆನ್ನುವ ಮಹನೀಯರು ವಿಚಾರಪೂರಿತವಾದ ನನ್ನ ಭಾಷಣಗಳನ್ನು ಕೇಳಿಯೇ ಇಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಕೆಳದರ್ಜೆಯ ಭಾಷಣಗಳನ್ನು ಕೇಳಿ ಕೇಳಿ ನಮ್ಮ ಜನರಲ್ಲಿ ವಿವೇಚನಾಶಕ್ತಿಯೇ ಮಾಯವಾಗಿಬಿಟ್ಟಿದೆ. ನಿನ್ನೆ ಮೊನ್ನೆ ಚಲಚ್ಚಿತ್ರ ಜಗತ್ತಿಗೆ ಕಾಲಿಟ್ಟ ತರುಣಿ "ಇಂದಿನ ಚಿತ್ರದ ಮಟ್ಟ ಏನೇನೂ ಸಾಲದು." ಎಂದು ಹೇಳಿದರೆ ಅದಕ್ಕೂ ತಲೆದೂಗುತ್ತಾರೆ. ಜನತೆಯಲ್ಲಿ ವಿಮರ್ಶಾ ಜ್ಞಾನ ಮೂಡಬೇಕಾದರೆ ನನ್ನಂಥ ಭಾಷಣಕಾರರು, ವಾಗ್ಮಿಗಳು ಮುಂದೆ ಬರಬೇಕು.

ಇಂದಿನ ನಮ್ಮ ಭಾಷಣಕಾರರು "ಗ್ರಾಮಾಫೋನ್" ನಂತೆ ಎಂಬುದನ್ನು ನಾನೂ ಒಪ್ಪುತ್ತೇನೆ. ಹೇಳಿದ್ದನ್ನೇ ಹೇಳಲಿ ಅವರಿಗೆ ಬೇಸರವಾಗುವುದಿಲ್ಲವಲ್ಲಾ, ಅವರ ತಾಳ್ಮೆ ಎಷ್ಟಿರಬಹುದು! ಎಂದು ಆಶ್ಚರ್ಯಪಟ್ಟಿದ್ದೇನೆ. ಪಾಠಶಾಲೆಗಳನ್ನು ಆರಂಭಿಸುವಾಗ "ಈ ಶಾಲೆಯಿಂದ ವಿಶ್ವೇಶ್ವರಯ್ಯನವರಂಥ ದೇಶ ಸೇವಕರು ಬರಲಿ!" ಎಂದು ಹೇಳುವುದು ಸರ್ವಸಾಮಾನ್ಯವಾಗಿಬಿಟ್ಟಿದೆ. ಆಸ್ಪತ್ರೆಗಳನ್ನು ತೆರೆಯುವಾಗಲೂ ಅಷ್ಟೆ! "ಈ ಆಸ್ಪತ್ರೆಯ ಖ್ಯಾತಿ ಹೆಚ್ಚಾಗಲಿ; ಇಲ್ಲಿ ಬರುವ ರೋಗಿಗಳೆಲ್ಲರಿಗೂ ಗುಣವಾಗಲಿ!" ಎಂದು ಹೇಳುತ್ತಾರೆ. ಆಸ್ಪತ್ರೆಯ ಖ್ಯಾತಿ ಹೆಚ್ಚಾಗುವುದು ಹೇಗೆ? ಅಲ್ಲಿಗೆ ಜಾಸ್ತಿ ರೋಗಿಗಳು ಹೋದರೆ ತಾನೆ?! ಆದರೆ, ರೋಗಿಗಳು ಜಾಸ್ತಿಯಾಗಲಿ ಎಂದು ಪರೋಕ್ಷವಾಗಿ ಹಾರೈಸಿದಂತಾಗಲಿಲ್ಲವೆ? ಮೊನ್ನೆ ನಮ್ಮ ನಾಯಕರೊಬ್ಬರು ಒಂದು ಕ್ಷಯರೋಗದ ಆಸ್ಪತ್ರೆಯ ಆರಂಭೋತ್ಸವವನ್ನು ನೆರವೇರಿಸುತ್ತಾ, "ಈ ಆಸ್ಪತ್ರೆಗೆ ಬೆಂಬಲ ನೀಡಲು ಸರ್ಕಾರ ಸದಾ ಸಿದ್ಧವಾಗಿದೆ" ಎಂದಿದ್ದಾರೆ. ಅಂದರೆ, ಕ್ಷಯ

ರೋಗಿಗಳನ್ನು ಅತ್ಯಧಿಕ ಸಂಖ್ಯೆಯಲ್ಲಿ ಒದಗಿಸಲು ಸಿದ್ಧವಾಗಿದೆ ಎಂದರ್ಥಮಾಡಿಕೊಳ್ಳೋಣವೆ? ಹೀಗೆ, ನಮ್ಮ ಭಾಷಣಕಾರರು ಹೇಳಿದ್ದನ್ನೇ ಹೇಳುವರು; ಅಥವಾ ಅರ್ಥವಿಲ್ಲದಂತೆ ಮಾತನ್ನಾಡುವರು. ಇದರಿಂದ ಜನತೆಯಲ್ಲಿ ಭಾಷಣದ ವಿಚಾರವಾಗಿ ತಾತ್ಸಾರ ಮೂಡಿದೆ.

ಭಾಷಣ ಮಾಡುವುದು ಸುಲಭ ಕಾರ್ಯವಲ್ಲ; ಪ್ರಚಂಡ ಸಭೆಯ ಮುಂದೆ ನಿಂತ ಭಾಷಣಕಾರನ ಪರಿಸ್ಥಿತಿ "ಎಂಜಿನ್ ಕೆಟ್ಟ ಏರೋಪ್ಲೇನಿನಂತೆ!" ಮೇಲಾಗಿ ನಮ್ಮ ಸಭಿಕರು ಬಡಿದರೆ ಕರತಾಡನ. ಹೊಡೆದರೆ ಕಲ್ಲೇಟು. ಸಭಿಕರ ಕೋಪ, ಲಿಯಾಖತರ ವಜ್ರಮುಷ್ಟಿಗಳ ಮುಂದೆ ಭಾಷಣಕಾರ ತಾಳ್ಮೆಯ ಮುದ್ದೆ ಆಗಬೇಕು.

ಪ್ರಾರಂಭದಲ್ಲಿ ಸಭೆ ಸೇರಿಸಲು ಜಾಣತನಬೇಕು. ಭಾಷಣ ಪ್ರಾರಂಭಿಸಬೇಕು. ಏನೋ ಹೊಡೆದಾಗ ಆಗುತ್ತಿದೆಯೆಂದು ಜನ ಸೇರುತ್ತಾರೆ. ಭಾಷಣದಲ್ಲಿ ಅತಿ ದೊಡ್ಡ ಪದಗಳನ್ನು ಪ್ರಯೋಗಿಸಬೇಕು. ಸೇರಿದ ಜನ ನಮ್ಮ ವಾಗ್ವೈಖರಿಗೆ ಬೆರಗಾಗಿ ನಿಲ್ಲುತ್ತಾರೆ. ಪ್ರಚಂಡ ಸಭೆಗಳನ್ನು ಸೇರಿಸುವುದೇ ಹೀಗೆ!

ಭಾಷಣಕಾರ ಸಮಾಜದ ಹಿತದೃಷ್ಟಿಯಿಂದ ಒಂದೆರಡು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಭಾಷಣಗಳನ್ನು ಬಯಲಿನಲ್ಲಿಯೇ ಮಾಡಬೇಕು, ಆಸ್ಪತ್ರೆಯ ಹತ್ತಿರದ ಆವರಣವಾದರೆ ಮತ್ತೂ ಅನುಕೂಲ. ಅಕ್ಕ ಪಕ್ಕದಲ್ಲೆಲ್ಲೂ ಕಲ್ಲಿನ ರಾಶಿ ಇರಬಾರದು. ಇದ್ದರೆ, ಅವು ಖರ್ಚಾಗುವ ಸಂಭವವಿದೆ. ಇಂಥ ಪರಿಸ್ಥಿತಿಗಳು ಒದಗುವ ಚಿಹ್ನೆ ಕಂಡುಬಂದರೆ, ಭಾಷಣವು ಅನರ್ಥಕ್ಕೆ ಎಡೆಗೊಡದಂತೆ ಏನು ಮಾಡಿದರೂ ಅದು ಒಳ್ಳೆಯದೆ!

ಈ ನನ್ನ ಪುಟ್ಟ ಭಾಷಣವನ್ನು ನೀವೆಲ್ಲರೂ ಕುತೂಹಲರಾಗಿ ಓದು (ಕೇಳು) ತ್ತಿದ್ದೀರೆಂಬ ಭರವಸೆ ನನಗಿದೆ. ಸಮಾಜದ ಮೇಲ್ಮೆಗಾಗಿ, ಬಡ ಬೋರೇಗೌಡನ ಹಿತಕ್ಕಾಗಿ, ನನ್ನಂತೆಯೇ ಭಾಷಣಕಾರರಾಗಬಯಸುವವರ ಸಲುವಾಗಿ, ಅನೇಕ ಉಪಯುಕ್ತ ಅಂಶಗಳನ್ನೊಳಗೊಂಡ ಒಂದು "ಭಾಷಣದ ಕೈಪಿಡಿ"ಯನ್ನು ರಚಿಸಿದ್ದೇನೆ. ಬಡ ಭಾರತೀಯನ ಜೀವನದ ಮಟ್ಟವನ್ನು ಏರಿಸಲು, ಸಮಾಜವನ್ನು ಸರಿಯಾದ ದಾರಿಗೆ ತರಲು, ಈ ನನ್ನ ಕೈಪಿಡಿಯೊಂದರಿಂದಲೇ ಸಾಧ್ಯ ಎಂದು ಎದೆ ತಟ್ಟಿ ಹೇಳುತ್ತೇನೆ. ಈ ನನ್ನ ಸೇವೆಗೆ ಸಮಾಜವು ಇಂದಲ್ಲದಿದ್ದರೂ, ಮುಂದಾದರೂ ಅಗ್ರಸ್ಥಾನ ಕೊಡುತ್ತದೆ ಎಂಬ ಭರವಸೆ ನನಗಿದೆ.

ಇತಿ, ಭಾಷಣ ಚತುರ,

ಹೋ. ನಂ. ಪರಮೇಶ್ವರನ್.

ನೂಕಾಚೆ ಬೇಗ


ಅಳಿಯತನ ಸಾಕಿನ್ನು; ಬಲು ಚತುರನಿವನಣ್ಣ
ನಿಲಬೇಡ ನಾಲ್ಕು ದಿನ, ಕಳುಹಿಸಣ್ಣ!
ಮರುಳು ಮಾತುಗಳಾಡಿ ಹಣಗಳಿಸೆ ಬಂದಿಹನು
ಮರಳಿ ದೋಚಲು ಬರುವ, ಕಳುಹಿಸಣ್ಣ.

ಮುಗುದೆ ಇವಳವನಲ್ಲಿ ಸೋತಿಹುದನರಿತು ತಾ
ಬಗೆಗೆ ಬಂದಂತೆಲ್ಲ ಬೇಡುತಿಹನಣ್ಣಾ;
ಹಗಲೆನ್ನ ದಿರುಳೆನ್ನ ದಿವನು ಕನ್ನ ದೊಳಿಹನು;
ಜಗಭಂಡ, ಸೋಮಾರಿ, ಮನೆ ಹೊಕ್ಕ ಮಾರಿ.

ಆಗೆರಡು ಸಾವಿರ ಮತ್ತೆ 'ದಕ್ಷಿಣೆ' ಎಂದ
ಮಾಗಿ ಮಾಸಗಳೆರಡು ಮೋಸ ಮಾಡಿ;
ಈಗ ಬಂದವ ತಿರುಗಿ ಯಾಚಿಸಲು ತೊಡಗಿಹನು,
ಬೇಗ ಕಳುಹಿಸು, ಇನ್ನು ಬಾರದಂತೆ.

ಹಿಂದಿವನು ನೆಪ ಹೇಳಿ ಹೊಡೆದ ಗಂಟುಗಳಿಂದ
ಒಂದು ದಿನವೂ ಇವಳ ಪೋಷಿಸಿಲ್ಲ;
ಚಂದದಲಿ ನಾಲಗೆಯ ಶೃತಿ ಗೈದು ಬೇಡುವನು
ನಿಂತ ನಿಲುವಲೆ ದೂಡು, ಬಾಗಿಲಾಚೆ.

—ರುದ್ರಮ್ಮ, ಬಿ ಎ



ರಿಟೈರಾಗೋಕೆ ಮುಂಚೆ

ನೋಡಿ, ಯಾಕೋ ಈಗಿನ ಮನೆಗಳಲ್ಲಿ ಮಹಡಿ ಮೆಟ್ಟಿಲುಗಳನ್ನ ಸರಿಯಾಗೇ ಇಡೋದಿಲ್ಲ. ಸುಮ್ಮನೆ ಅಡಿ ಅಡಿ ಎತ್ತರ ಇಡತಾರೇಂತ ಕಾಣಿಸುತ್ತೆ. ಅದೇನೋ ಮೊದಲಿನ ಹಾಗೆ ಸರಾಗವಾಗಿ ಹತ್ತೋಕೆ ಆಗೋದಿಲ್ಲಾ. ಅದೇನು ಕಥೆನೋ ಯಾರು ಕಂಡ್ರು.

ಅದೆಲ್ಲಾ ಸರಿಯೆ, ಈ ಪೇಪರ್‌ನೋರು ಕೂಡಾ ಹೀಗಾಗಬೇಕೇ. ಒಂದೇ ಸಮನೆ ಪುಟ್ಟ ಅಕ್ಷರದಲ್ಲಿ ಎಲ್ಲಾ ಪೇಪರನೂ ಪ್ರಿಂಟ್ ಮಾಡೋದೆ. ಸರಿಯಾಗಿ ತಿಳಿಯೋ ಹಾಗೆ ಪ್ರಿಂಟ್ ಮಾಡಿದ್ರೆ ಇವರಪ್ಪನ ಮನೆಗಂಟೇನು ಕೊಳ್ಳೆಹೋಗುತ್ತೇ. ಬೆಳಗಾಗೆದ್ದು ಕೈಲಿ ಪೇಪರ್ ತೆಕ್ಕೊಂಡಾಂದ್ರೇ, ಒಂದು ಮೈಲಿ ದೂರ ಹಿಡಿಕೋಬೇಕು ಕಾಣಿಸೋಕೆ. ಮೊನ್ನೆ ರಂಗಯ್ಯಂಗಾರಿ ಮನೆಗೆ ಹೋದೆ, ಲೈಟಾಫೀಸಿಗೆ ಟೆಲಿಫೋನು ಮಾಡೋಣಾಂತ. ಹತ್ರ ನಿಂತಕೊಂಡರೆ ನಂಬರ್ರೇ ಕಾಣಿಸೋದಿಲ್ಲ. ನನಗೆ ಚಾಳಿಸ ಅಂದ್ರೆ ಯಾರಾದ್ರೂ ನಕ್ಕಾರು ಇಷ್ಟು ವಯಸ್ಸಿಗೆ ಚಾಳಿಸ ಬಂದ್ರೆ ದೇವರೇ ಗತಿ ಅಂದ್ಕೊಂಡೆ.

ಜನ ನೋಡಿ. ಪಿಸಿಪಿಸಿ ಅಂತಲೇ ಮಾತಾಡೋದು. ರೇಷನ್ ಅಕ್ಕಿ ತಿಂದು ಜನಗಳಿಗೆ ಮಾತಾಡೋಕೆ ಕೂಡಾ ಶಕ್ತಿ ಇಲ್ಲವಲ್ಲಾ ಅನ್ನಿಸುತ್ತೇ. ರಾಮರಾಯನ ಮನೆಗೆ ಹೋದೆ. ನಾಲ್ಕೈದು ಹುಡುಗರು ಮಾತಾಡ್ತಾ ನಿಂತಿದ್ದವು. "ಎಲ್ರಯ್ಯಾ, ರಾಮರಾಯ್ರು" ಎಂದೆ. ಒಬ್ಬ ಬಂದು ಏನೋ ಪಿಸಪಿಸ ಅಂತಂದ. ನನಗೆ ರೇಗಿತು. ಅಯ್ಯೋ ಪ್ರಾಣಿ ನಿನಗೆ ಮಾತಾಡೋಕೆ ಕೂಡಾ ಶಕ್ತಿ ಇಲ್ಲದೆ ಹೋದ್ರೆ, ಏನ್ತಾನೆ ಮಾಡ್ತಿಯೆ ಅಂದಕೊಂಡು "ಗಟ್ಟಿಯಾಗಿ ಹೇಳಪ್ಪಾ" ಅಂದೆ. ಹುಡುಗ "ಹೌದ್ರಿ. ನಿಮಗೂ ವಯಸ್ಸಾಯಿತು. ಪಾಪ, ಕಿವಿ ಸರಿಯಾಗಿ ಕೇಳಿಸೊಲ್ಲಾ" ಅನ್ನೋದೆ.

ಅದೇನೋ. ಎಲ್ಲಾ ಬಹಳದೂರ ಆಗಿ ಕಾಣಿಸತ್ತೆ. ವಿಶ್ವೇಶ್ವರಪುರಕ್ಕೂ ಮಾರ್ಕೆಟ್ಟಿಗೂ, ಎಷ್ಟು ದೂರ ಅನ್ನೋದು ಮೊನ್ನೆ ತಾನೇ ಗೊತ್ತಾಯಿತು! ಏನು 3 ಮೈಲಿ ಇರಬಹುದೋ ಏನೋ. ಅಂತೂ ಬಸ್ಸಿಗೆ ಅನ್ಯಾಯವಾಗಿ 1 ಆಣೆ ಕೊಡಬೇಕಲ್ಲಾ ಅಂತ ನಡಕೊಂಡೇ ಬಂದೆ. ಕಲಾಸಿಪಾಳ್ಯ ಬರೋ

ವೇಳೆಗೆ ಏದುಬ್ಬಸ ಬಂತು. ಸದ್ಯ ಎದುರಿಗೆ ಬರ್‍ತಿದ್ದ ಜಟ್ಕಾಗೆ ಸಾಲ್ತಾಕ್ ಕುಕ್ಕಿ ಮನೆ ಸೇರೋ ಹೇಳಿಗೆ, ಅಶ್ವಮೇಧಯಾಗ ಮಾಡಿದ ಹಾಗಾಯ್ತು.

ಈಗಿನ ಕಾಲದ ಗಡಿಯಾರಗಳಿಗೆಲ್ಲಾ ಏನೋ ಬಂದಿದೆ. ಆಫೀಸಿಗೆ ಸೇರೋ ವೇಳೆಗೆ ಹನ್ನೊಂದುವರೆ ಆಗುತ್ತೆ. ಆ ಹಾಳು ಬಸ್ಸು ಸರ್ಕಲ್ಲಿನ ಹತ್ತಿರ ಹತ್ತೂವರೆಗೆ ಸರಿಯಾಗಿ ಬಿಟ್ಟುಬಿಡುತ್ತೆ. ಮನೆಯಿಂದ ಹತ್ತು ಗಂಟೆಗೆ ಹೊರಟರೂ, ಬಸ್ಸು ಹೋಗಿ ಕಾಲುಗಂಟೆ ಆಗಿರುತ್ತೆ. ಅದೇ ನೋಡಿ ಹಿಂದೆ, ಹತ್ತೂ ಇಪ್ಪತ್ತಕ್ಕೆ ಮನೆಬಿಟ್ಟರೂ, ಓಡೋ ಬಸ್ಸಿನಲ್ಲಿ ಹಾರಿ ಕುಳಿತುಕೋ ಬಹುದಾಗಿತ್ತು. ಈ ಡ್ರೈವರ್‍ರುಗಳಿಗೂ, ಅವರ ಗಡಿಯಾರಕ್ಕೂ ಏನೋ ಬಂದಿದೆ.

ಬಟ್ಟೆ ಕ್ವಾಲಿಟಿಯ ಸರಿಯಾಗಿ, ಎಲ್ಲಾ ಬಟ್ಟೆಗಳೂ ಬಿಗಿ. ಆಫೀಸಿಗೆ ಹೋಗುವಾಗ ಷರಾಯಿ ಹಾಕೋ ಅಭ್ಯಾಸ ಈ ಷರಾಯಿಗಳಿಗೆಲ್ಲಾ ಏನಾ ಯಿತೋ ಕಾಣೆ, ಎಲ್ಲಾ ಫಿಟ್ಟು. ಎಲ್ಲಾ Strike ಮಾಡಿದೆ. ಷರಟುಗಳೆಲ್ಲಾ ಟೈಟು. ಪೂಲೀಸ್ ಹಾಕೋಣಾಂದ್ರೆ, ಬಗ್ಗೋಕೆ ಆಗೋದೇ ಇಲ್ಲ.

ಯಾರು ನೋಡಿದರೂ, ಚಿಳ್ಳೇರಿಗಳ ಹಾಗೆ ಕಾಣಿಸ್ತಾರೆ. ನೋಡಿ, ನಮ್ಮಾಫೀಸಿಗೆ ಒಂದು ಹೊಸ ಕ್ಲಾರ್ಕನ್ನು ವರ್ಗಮಾಡಿದ್ದಾರೆ. ಎಲ್ಲೋ ಪಾಪ ನೆನ್ನೆ ಹುಟ್ಟಿದ ಮಗು ಅಂತ ಅಂದುಕೊಂಡೆ. "ಏನಯ್ಯಾ ನಿನ್ನ ವಯಸ್ಸು" ಅಂದೆ. "ಮೂವತ್ತು" ಅಂದ. ಸರಿ, ಈ ಚಿಳ್ಳೇರಿಗಳನ್ನ ಕಟ್ಕೊಂಡು ಹೇಗೆ ಕೆಲಸ ಮಾಡೋದು ಅನ್ನಿಸಿತು.

ಹಾಗೇ ಕಾಲೇಜಿನ ಕಡೆ ಹೋದೆ. ಪಾಪ ಹುಡುಗರೊಬ್ಬರೇ ಹಸುಗೂಸು ಗಳೂ ಅಂತಿದ್ದೆ. ಕಾಲೇಜಿನ ಮೇಷ್ಟ್ರು ನೋಡಿದರೆ, ಪಾಪ! ಅನ್ನಿಸುತ್ತೆ. ನನ್ನ ತಮ್ಮನ ಮಗನಿಗೆ ಸೀಟು ಬೇಕೂಂತ ಪ್ರಿನ್ಸಿಪಾಲ್‌ನ ನೋಡೋಕೆ ಹೋದೆ. ನೋಡಿ ಏನನ್ಯಾಯ. ಅಷ್ಟು ಚಿಕ್ಕ ಹುಡುಗ ಪ್ರಿನ್ಸಿಪಾಲ್ ಕೆಲಸ ಹೇಗ್ತಾನೆ ಮಾಡ್ತಾನೆ. ಶುದ್ಧ ಆಭಾಸ!

ಶಾರದಾ ಭವನ್ ಹೋಟೇಲಿಗೆ ಒಂದು ಕಪ್ ಕಾಫಿ ಕುಡಿಯೋಣಾಂತ ಹೋದೆ. ಕಾಫಿ ಆರ್ಡರ್ ಮಾಡಿದೆ. ಲಾಯರ್ ಗುಂಡೂರಾಯನೂ ಬಂದ. (ನಾನೂ ಅವನೂ S. S. L. C. ಪರೀಕ್ಷೇಲಿ ಒಟ್ಟಿಗೆ ಫೇಲಾದೋರು!). "ಏನಯ್ಯಾ ಗುಂಡೂರಾಯ ಬಹಳ ದಿನ ಆಯ್ತು ನೋಡಿ" ಅಂದೆ.

"ಹೌದಯ್ಯ! ಒಂದೆರಡು ವರ್ಷ ಆಯ್ತು. ಎಲ್ಲಿ ಬಿಡುವೇ ಇಲ್ಲ. ಈ ಹಾಳು ಕೆಲಸ. ಸರಿ ಎಲ್ಲಾ ಚೆನ್ನಾಗಿದ್ದೀರೇನಯ್ಯಾ" ಅಂದ.

"ಚೆನ್ನಾಗಿದ್ದೀನಯ್ಯಾ! ಏ! ಮಾಣಿ, ಎರಡು ಪ್ಲೇಟ್ ಮಸಾಲೆ" ಅಂತ ಆರ್ಡರ್ ಮಾಡಿ.

"ಏನಪ್ಪ, ಹೇಗಿದೆ ನಿನ್ನ ಬಿಸಿನೆಸ್. ನಿನ್ನ ಮಗ ಏನು ಮಾಡ್ತಾ ಇದ್ದಾನೆ" ಅಂತ ಕೇಳಿದೆ.

ಅದಕ್ಕೆ ಗುಂಡೂರಾಯ "ನನ್ನ ಮಗನೂ ಲಾಯರಿ ಆಗಿದ್ದಾನಪ್ಪ. ಏನೋಪರವಾಗಿಲ್ಲ. ಅಲ್ಪಸ್ವಲ್ಪ ಪ್ರಾಕ್ಟೀಸ್ ನಡೆಯುತ್ತೆ" ಅಂದ.

"ಮದುವೆ ಆಯ್ತೋ ಅಥವ ಇಲ್ಲವೋ" ಅಂದೆ.

ಇದೇನನ್ಯಾಯ. ನೀನೂ ಬಂದಿದ್ದೆಯಲ್ಲಯ್ಯಾ. ಅದೇ ನಿನ್ನ ದೂರದ ಸಂಬಂಧಿ, ದಾವಣಗೆರೆ ಶ್ರೀಕಂಠಯ್ಯನ ಮಗಳಲ್ಲವೇನಯ್ಯಾ ನನ್ನ ಸೊಸೆ."

"ಹು. ಹು. ಮರೆತನಯ್ಯ. ಹಾಳು ಮರೆವು" ಅಂದೆ. ಸರಿ ಅಷ್ಟು ಹೊತ್ತಿಗೆ ಕಾಫಿ ಬಂತು. ಕಾಫಿ ಕುಡಿದೆವು. ಅಷ್ಟರಲ್ಲಿ ವಾಣಿ ಮಸಾಲು ದೋಸೆ ತಂದ. "ಯಾರಯ್ಯಾ ಆರ್ಡರ್ ಮಾಡಿದ್ದು" ಎಂದೆ. "ಯಾಕ್ ಸಾರ್ ನೀವೇ ಆರ್ಡರ್ ಮಾಡಿದರಲ್ಲಾ ಸಾರ್" ಅಂದ. ಸರಿ, order ಮಾಡಿದೆವೋ ಇಲ್ಲವೋ ತಿಂದುಬಿಟ್ಟು ನಡೆದೆವು. ಆ ಬೀದಿಯಲ್ಲಿ ಹೋಗುವಾಗಲೇ ನನಗೆ ಜ್ಞಾಪಕ ಬಂದಿದ್ದು. ಆದರೂ ನನಗೇನೂ ಅಷ್ಟು ಜ್ಞಾಪಕಶಕ್ತಿ ಕಮ್ಮಿ ಅಲ್ಲ.

ಬೆಳಗ್ಗೆ ಎದ್ದು ರುಮಾಲು ಕಟ್ಕೋಕೆ ಕನ್ನಡಿ ತೆಗೆದುಕೊಂಡೆ. ಅದೇನು ಕನ್ನಡಿ. ಎಲ್ಲಾ ಗೀರು ಗೀರು, ಮಬ್ಬು ಮಬ್ಬು. "ಲೇ! ಸರಿಯಾದ ಕನ್ನಡಿ ಇಲ್ಲವೇನೇ?" ಎಂದೆ. "ಸರಿ, ಮೊನ್ನೆ ತಾನೇ ರಾಜನ ಮದುವೇಲಿ ತೆಗೆದ ಕನ್ನಡಿ! ನಿಮ್ಮ ಮುಖ ಮುದಿ ಕಾಣಿಸಿದರೆ, ಕನ್ನಡಿ ತಪ್ಪೇ!" ಅನ್ನಬಹುದೇ ನನ್ನ ಕೈಹಿಡಿದೋಳು?

ಆಫೀಸಿಗೆ ಹೋದೆ. ಆಫೀಸಿನಲ್ಲಿ ಎಲ್ಲರಿಗೂ ಸಂಭ್ರಮ. ಎಲ್ಲಾ ಕ್ಲಾರ್ಕುಗಳೂ, ಪ್ಯೂನುಗಳೂ ಏನೋ ಗುಸುಗುಸು ಅಂತ ಮಾತಾಡ್ತಾ ಇದ್ರು.

ನಾಲ್ಕು ಗಂಟೆಗೆ, ಹೆಡ್‌ಕ್ಲಾರ್ಕು, ಇನ್ನೂ ನಾಲ್ಕೈದು ಜನಗಳೂ ನನ್ನ ರೂಮಿಗೆ ಬಂದ್ರು.

"ಏನ್ರಿ ಸಮಾಚಾರ; ಏನು ಎಲ್ಲಾ ಒಟ್ಟಿಗೆ ಬಂದಿದ್ದೀರಲ್ಲಾ?"

"ಏನೂ ಇಲ್ಲಾ ಸಾರ್. ಕ್ಷಮಿಸಬೇಕು ಸಾರ್. ನಾವೆಲ್ಲಾ ತಮಗೆ ಲಾಲ್‌ಬಾಗ್ ಹೋಟೇಲಿನಲ್ಲಿ ಪಾರ್ಟಿ ಇಟ್ಟಿದ್ದೇವೆ ಸ್ಸಾರ್. ಖಂಡಿತ ಒಪ್ಪಿಕೋಬೇಕು. ತಮಗೆ ಯಾವಾಗ ಬಿಡುವಾಗುತ್ತೆ ಅಂತ ಹೇಳಿದ್ರೆ ಡೇಟ್ ಫಿಕ್ಸ್‌ಮಾಡ್ಕೊಳ್ಳೋಕೆ ಸರಿಯಾಗುತ್ತೆ."

ನನಗೆ ಸಂತೋಷವಾಯಿತು. ಏನೋ ಪ್ರಮೋಷನ್ ಬಂದಿದೆ. ಸದ್ಯ ಇಷ್ಟು ದಿನಗಳಾದ ಮೇಲಾದರೂ ಬಂತಲ್ಲ. ಆದರೆ ನನಗೆ ಗೊತ್ತಾಗೋಕೆ

ಮೊದಲೇ ಇವಕ್ಕೆಲ್ಲಾ ತಿಳಿದಿದೆಯಲ್ಲಾ. ಆದಕ್ಕೆ ಈಗಿನ ಕಾಲದ ಹುಡುಗರು ಚುರುಕು ಅನ್ನೋದು. ಸರಿ, ವಿಚಾರಿಸೋಣ ಅಂದುಕೊಂಡೆ.

"ಯಾಕ್ರೀ ನನಗೆ ಪಾರ್ಟಿ. ಇನ್ನೂ ಪ್ರಮೋಷನ್ ಆರ್ಡರ್ ಬಂದ ಮೇಲೆ ಇರಲಿ ಬಿಡಿ. ಈಗಲೇ ಅದರ ಯೋಚನೆಯೇನು?"

"ಇಲ್ಲಾ ಸಾರ್. ಕ್ಷಮಿಸಿ. ತಾವು ನಾಳೇ ಫಸ್ಟಿನಿಂದ ರಿಟೈರ್ ಆಗ್ತಿರಲ್ಲಾ ಸಾರ್. ಆದಕ್ಕೋಸ್ಕರವೇ ಪಾರ್ಟಿ ಸಾರ್!"

ನಾನು ಕುಸಿದೆ.

—ರಾಮಚಂದ್ರ.

[ಇಂಗ್ಲೀಷಿನ ಮೂಲಕ್ಕಿಂತ ಇದು ಚೆನ್ನಲ್ಲವೇ? ಸಂ.]



ಈಗಿನ ವಿದ್ಯಾರ್ಥಿಗಳ ಪೂಜೆಯ ಪದ್ಧತಿ — ಹಿನ್ನೆಲೆಯಲ್ಲೇ ಇಲ್ಲೇ ಮಾಷ್ಟ್ರು!!

ಚಿಂತೆ

ನವರಾತ್ರಿ ಹಬ್ಬ. ಹೌದು. ಯಾರಿಂಗೆ? ಯಾತಕ್ಕೆ? ಬೆಲ್ಲ ತೆಂಗಿನ ಕಾಯಿ ರವೆ ತುಪ್ಪ ಅರಶಿನ ಕುಂಕುಮ ಹೂವು ಹಣ್ಣು! ಅಯ್ಯೋ! ಸಾಲ, ಕಂತು, ಅಡವು, ಮಗಳು, ವರ, ಅಳಿಯ (ನಂಟರು) ರೈಲು ಚಾರ್ಜು. ಹಾಲು ಮೊಸರು ರೇಷನ್ ಪ್ರಮಾಣ ಬೆಲೆ ಕಲ್ಲು ಮಣ್ಣು ಬಾಡಿಗೆ ದೀಪದ ಖರ್ಚು. ಮಕ್ಕಳು ಲಂಗ ಬನೀನು ಪಂಚೆ ಧೋತ್ರ ಸೀರೆ ಕುಪ್ಪಸ! ಅಯ್ಯೋ! ಅರ್ಥವಿಲ್ಲ ಹೌದು. ಅರ್ಥ ಕಾಮ ಮೋಕ್ಷ! ಧರ್ಮ. ಆಳು ಕಾಳು ಕಾಟ ಚಂದ ದಾನ ದಕ್ಷಿಣೆ ನಾಟಕ ಸಿನಿಮ ಸಂಗೀತ ನಾಟ್ಯ ಭಾಷಣ ನಾಡಹಬ್ಬ ಕನ್ನಡಮ್ಮ ಒಂದಾಗು ಮುಂದಾಗು? ಬಾಕಿ ಸುಸ್ತಿಬಡ್ಡಿ ಹರಾಜು! ತುಟ್ಟಿಭತ್ಯ ಹಣದುಬ್ಬರ ಗ್ರೇಡು ಪ್ರಮೋಷನ್ ಸೀನಿಯಾರಿಟಿ ಜಾತಿ ಮಂತ್ರಿ ಮಾವ ಚಿಕ್ಕಪ್ಪ ಅರ್ಜಿ ಉಪವಾಸ ದೇವರು ದಿಂಡರು ಭಂಡರು ಹೊಸಬಟ್ಟೆ ಯಾರು ತೋರಿಸುವವರು ಟಂಡನ್ ನೆಹರು ಮುನ್ಷಿ ಚುನಾವಣೆ ನಿಲ್ಲೋಣವೆ ರಾಜಿನಾಮೆ ನಾಳೆ ಊಟ ರಾತ್ರಿ ಊಟ ನಾಳೆ ನಾಳದ್ದು ಆಚೆನಾಳದ್ದು ಮಗು ತೊಟ್ಟಿಲು ಲಿವರ್ ಜನ್ಮ ನಾಯಿ ಮರಿ ಜನ್ಮ ಬೇರೆ ಅರ್ಥ ಪಾವು ಇಲಿ ಹೆಗ್ಗಣ ಕ್ಲಬ್ಬು ಇಸ್ಪೀಟು ಕ್ರಾಸ್ ವರ್ಡ್ ದಂಡ ದಂಡ ದಂಡ ನಿಷ್ಕರುಣೆ ಹಾಳಾಗಿ ಹೋಗಲಿ ಹಾಳಾಗಿ ಬರಲಿ ಕಾಸಿಗೆ ಕಾಸು ಕನ್ನ ದರೋಡೆ ಕತೆ ಕಾದಂಬರಿ ಕೆಂಪು ವಿಶೇಷ ಸಂಚಿಕೆ ರೇಡಿಯೋ ನರಕ. ಸುಳ್ಳು ಬಡವ ಬಡವಾಗ್ನಿ ರಷ್ಯ ಕರ್ಮ ನವರಾತ್ರಿ ಒಂಬತ್ತು ದಿನ ಒಂದು ವಾರ ಮತ್ತೆರಡು ದಿನ ದಸರಾ ಹತ್ತನೆಯದು ಹಬ್ಬ ಮುಳುಗಿ ಹೋಯ್ತೆ ಖರ್ಚು ವೆಚ್ಚ ಬಡ್ಜೆಟ್ ಎಕ್ಸಿಬಿಷನ್ ಬೆಂಕಿ ಬಳೆ ರಿಬ್ಬನ್ ಸರಸು ಭೀಮು ಫೇಯಿಲು ನೌಕರಿ ಜಾತಿ ಕೋಮು ನೇಮು ಅಯ್ಯೋ ಸರಸ್ವತಿ ಪೂಜೆ ನಿತ್ಯ ದರಿದ್ರ ವಿಷ ಆಯುಧ ಪೂಜೆ ಅಟ್ಲಾಂಟಿಕ್ ಒಪ್ಪಂದ ಹಬ್ಬ ಹೊಸ ಲಂಗ ಕೋತಿ ಕುಣಿತ ಅಕ್ಕಿ ಒಂದೇ ಸೇರು.

— ಶಾಸಕೀಶಾಂ.

—— o ——


'ಮಗು—ಅಳು'

"ಓ! ಮಗು ಎದ್ದಿದೆ...ಎಷ್ಟೊತ್ತಿಂದ ಅಳ್ತಿದೋ ಏನೋ, ಪಾಪ. ಯಾಕಪ್ಪ....ಏನು, ಏನಾಯ್ತು, ಓನ್ಬೇಕು .. ಏಳೀಂದ್ರೆ.... ಅ .. ಕಳ್ಳನೇ, ಕಳ್ಳ ಯಾಕ್ಬರ್ತಾನೆ, ಬಂದ್ರೂನೂ ನಿಮ್ಮ ಧ್ವನಿ ಕೇಳೀ ಓಡ್ಹೋಗ್ತಾನೆ.......ಮಗು ಯಾಕೋ ಒಂದೇ ಸಮನೆ ಅಳ್ತಿದೆ... ಎದ್ದು ದೀಪ ಹಾಕಿ, ಚೇಳುಗೀಳು ಕಚ್ಚಿದೆಯೇನೋ ನೋಡ್ತೀನಿ. ಏನು ಹ್ಞಾ ಅಂದು ಹಾಗೆ ಮಲಗಿದೀರಾ ... ದೀಪ ಹಾಕೀಂದ್ರೆ. ಸ್ವಿಚ್ಚೆಲ್ಲಿದೆ ಅನ್ನೋದೂ ಮರ್ತ್ಹೋಯ್ತೆ? ...ಆ ದೀಪ ಇಲ್ವೆ? ಇಲ್ದೆ ಏನು, ನೀವ್ಸುಮ್ನೆ ಗೋಡೆ ಕೆರ್ದು ದೀಪ ಬೇಕು ಅಂದ್ರೆ ಅದು ಹೇಗೆ.... ಅಯ್ಯೋ....ಸ್ವಿಚ್‌ಗಿಚ್ ಮುರ್ದು ಬಿಟ್ಟೀರಿ....ನೋಡಿದ್ರಾ.... ಈಗ ಜ್ಞಾಪಕ್ಬಂತು. ಆ ಬಲ್ಬು ವರ್ಸೋವಾಗ್ ಇವತ್ತು ತೆಗೆದು ಆ ನಿಮ್ಮ ಕೋಟಿನ ಜೇಬ್ನಲ್ಲಿಟ್ಟಿದ್ದೆ.... ಅದೇ, ಆ ನೀಲಿ ಗೀರಿನ್ಕೋಟು...ನಿಮ್ಹತ್ರ ಮೂರು ಕೋಟುಗಳೀರೋದು ನನ್ನ ತಪ್ಪೆ?....ಹೇಳಿದ್ನಲ್ಲ ನೀಲಿ ಕೋಟು ಅಂತ....ಆ....ಸಿಕ್ತೆ? ಸರಿ ಹಾಕಿ ದೀಪ.. ಬಲ್ಬ್ಹಾಕಿದ್ಮೇಲೆ ಸ್ವಿಚ್ ಹಾಕಬೇಡವೆ?....ಅಯ್ಯೋ... ಆ ಸ್ವಿಚ್ ಮೇಲೆ ನೀವ್ತೋರುಸ್ತಿರೋ ಪೌರುಷ ನೋಡಿ ಪಾಪ ಮಗು ಹೆದರ್ತಿದೆ, ಆ ಸೀತ ಹಾರ್ಮೋನಿಯಂ ಬಾರ್ಸೋವಾಗ್ಲೂ ಇಷ್ಟ್ಹೊಡ್ಯೋದಿಲ್ಲ, ಮಗು ಹೋಗ್ಲಿ, ಮೆಯಿನ್ ಸ್ವಿಚ್ ಹಾಕಿದೀರಾ?....ಯಾರಾರ್ಸಿದ್ರೋಂದ್ರೆ, ನಾನು, ಮನೆಯವರೇ ಹೇಳಿದಾರೆ....ಒಂಬತ್ತು ಘಂಟೆಗೆ ಸರೀಗೆ ಆರಿಸ್ಬಿಡು ಅಂತ ...

ಅಬ್ಬ!....ಕುರುಡಂಗೆ ಕಣ್ಬಂದ್ಹಾಗಾಯ್ತು. ಈ ಮನೇಲಿ ಒಂದು ದೀಪ ಹಾಕೋದೂ ಒಂದು ಅವಾಂತ್ರ....ಪಾಪ ಮಗು ಅತ್ತು ಅತ್ತು ಸಾಕಾಗಿದಾನೆ .. ಯಾಕೋ ಏನೋ.... ಈ ಕೈನೋಡಿ ಕೆಂಪಗಾಗ್ಹೋಗಿದೆ....ಆ....ನನಗೇನು ಬುದ್ಧಿ ಇಲ್ವೆ? ಅದರಮೇಲೆ ಕೂತ್ಕೋಳೋದಿಕ್ಕೆ? ಏನೋ ಕಚ್ಚೇ ಇರ್ಬೇಕು....ಅಲ್ಬಿದ್ದಿರೊ ಹೂವು ಚೇಳೇ ನೋಡಿ!. ಹೊಟ್ಟೇ ನೋವೋ, ಅಥ್ವಾ ...ನೋಡಿ, ಮುಟ್ಟಿದ್ರೇ ಹೇಗಳುತ್ತೆ ನಾನೇನು ಅದುಮಿಲ್ಲಲ್ಲ... ಏನೋ ಆಗೇ ಇದೆ, ಇದಕ್ಕಿವತ್ತು....ಹೋಗ್ಲಿ....ಆ ಗ್ರೈಪ್ ಸಿರಪ್ಪಾದ್ರೂ ಹಾಕ್ತೀನಿ ಕೊಡಿ....ಅಲ್ಲೇ ಇದೆ ಅಂದ್ರೆ ಎಲ್ಲಿ? ಎಲ್ಲಿ? ಆ ಟೇಬಲ್ಮೇಲಿದೆ....ಯಾವ್ಟೇಬಲ್ಲೆ? ಮನೇಲಿರೋ ಟೇಬಲ್ಮೇಲೆ ಇನ್ನು ಯಾವ ಮನೆ ಅನ್ಬೇಡಿ... ಸಿಕ್ತೆ, ಸದ್ಯ ಕೈ

ಹಿಡ್ಕೊಳ್ಳಿ ಸ್ವಲ್ಪ....ಮಗೂದು... ಏನು ಕೈಹಿಡ್ಕೊಳ್ಳಿ ಅಂದ್ರೆ, ಬಲವೆಲ್ಲಾ ಬಿಟ್ಟು ಅದರ ಎದೆ ಅದುಮ್ತೀರಲ್ಲ .. ಪಾಪ, ಮೊದಲೇ ಅದರ ಕಷ್ಟ ಅದಕ್ಕೆ.... ಆಯ್ತಪ್ಪ....ಬೇಡ ಅಳ್ಬೇಡ ಸುಮ್ನಿರು. ಶೆಕೇನೋ ಏನೋ....ಆ ಬೀಸಣಿಕೆ ಆದ್ರೂ ಕೊಡಿ ...ಬೀಸ್ತೀನಿ....ಆ ಮಳೆ ಬರ್ತಿದ್ಯೆ? ಮತ್ತೆ ಶಬ್ದನೇ ಕೇಳ್ತಿಲ್ಲ ನನಗೆ ...ನೋಡಿದ್ರಾ....ಅದಕ್ಕೆ ಮಗು ಅಳ್ತಿರೋದು ...ಪಾಪ ಛಳೀಗ್ನಡುಗ್ತಿದೆ ಆ ರಗ್ಗು ಕೊಡಿ ಹೊದ್ದಿಸ್ತೇನೆ .. ಅಳ್ಬೇಡಪ್ಪ, ಯೂ.......ಕ್, ನಾನೇನು ಹಾಡೇಳ್ಳಿಕ್ಹೋಗ್ಲಿಲ್ಲ....ನನಗೇನು ಹುಚ್ಚೇ, ಈ ಅಪ ರಾತ್ರೇಲಿ ಹಾಡ್ಹೇಳ್ಳಿಕ್ಕೆ ಏನೋ, ಒಂದೆರಡು ಮಾತ್ನಾಡಿ ಮಗೂನ್ಸುಧಾರಿಸೋಣ ಅಂದ್ರೂ ನಿಮಗೆ ಸಹನೆ ಇಲ್ಲ....ನನಗೇನು, ಬಾಯಿಗೆ ಬೀಗ ಹಾಕ್ಕೊಂಡು ಮಲ್ಕೊಂತೀನಿ.... ಆ ...ಹ್ಞೂ....ನಿದ್ದೆಮಾಡ್ಬಿಟ್ಟದೆ, ಪಾಪ. ಎಷ್ಟು ಕಷ್ಟ ಪಡ್ತೊ ಏನೊ ಪಾಪ, ಹೇಳ್ಕೊಳ್ಳೊಕ್ಸಹ ಬಾಯ್ಬರ್ದು ಅದಕ್ಕೆ. ದೀಪ ಆರಿಸ್ಬಿಡಿ, ಹೋಗ್ಲಿ.”

— ಶ್ರೀ "ರವೀಂದ್ರ"



ಗಾಡಿ ಕೇಳಿದ ಕುದುರೆ, ಕ್ಯಾರಟ್ ಕಂಡರೆ ಹಿಮ್ಮೆಟ್ಟಿತ್ತೆ.

ಎಚ್ಚರಿಕೆ ಎಲ್ಲಪ್ಪ

ನಮ್ಮ ನೆಹ್ರೂಗೆ ಬಲು ಕಷ್ಟ ಬಂತು ಈಗ, ಏಕೆಂದರೆ ನಮ್ಮೂರಿನ ಎಲ್ಲಪ್ಪ ಮೊನ್ನೆ ಹೋಗಿಬಿಟ್ಟ. ಐದು ವರ್ಷದ ಪ್ಲಾನ್, ಮೂರು ವರ್ಷದ ಯೋಜನೆ. ಮುಂದಿನ ವರ್ಷಕ್ಕೆ ಮುಂಜಾಗ್ರತೆ. ಇಂತಹ ಕೆಲಸ ಕಾರ್ಯ ಗಳಿಗೆಲ್ಲಾ ನಮ್ಮ ಎಲ್ಲಪ್ಪ ಎತ್ತಿದ ಕೈ. ಅವನೊಬ್ಬನಿಗೆ ದೇವರು ಆಯುಸ್ಸು ಕೊಟ್ಟು ಕಾಪಾಡಿದ್ದರೆ, ಪಂಡಿತ ನೆಹ್ರೂ ಅವರಿಗೆ ಬಲಗೈ ಅಂತೆ ಇರುತ್ತಿದ್ದ. ಅವರ ಭವಿಷ್ಯ ಸುಗಮವಾಗಿಸುತ್ತಿದ್ದ.

ತನ್ನ ಜನತೆಯವರಿಗಿಂತ ಮುಂಚೆ ಹುಟ್ಟಿ ಮುಂಜಾಗ್ರತೆ ತೆಗೆದು ಕೊಳ್ಳೋಣ ಅಂತ, ಆತ ಏಳನೆಯ ತಿಂಗಳಿನಲ್ಲೇ ಹುಟ್ಟಿದ. ಹುಡು ಗರು ಅನುಭವಿಸಲೇಬೇಕಾದ ಖಾಯಿಲೆಗಳನ್ನೆಲ್ಲಾ ತನ್ನ ಮೊದಲನೆಯ ವಯ ಸ್ಸಿನಲ್ಲಿಯೇ ಅನುಭವಿಸಿ ಮುಗಿಸಿದ. ಶಾಲೆಗೆ ಸೇರಿದಾಗಲೂ ಅದೇ ರೀತಿ. ಮುಂದಿನ ತರಗತಿಯ ಪಾಠ ಪ್ರವಚನಗಳಿಗೆ ಸಿದ್ಧವಾಗುವ ಅವಸರದಲ್ಲಿ, ಇಂದಿನ ಪಾಠಗಳನ್ನು ತೇಲಿಸಿಬಿಟ್ಟಿದ್ದೂ ಉಂಟು. ಆಟಪಾಟಗಳಲ್ಲೂ ಇದೇ ಅವಸರ. ಪಟದ ಹಬ್ಬದಲ್ಲಿ ತಾನು ಚೆನ್ನಾಗಿ ಹಾರಿಸಬೇಕು ಅಂತ, ಬಿಸಿಲು ಕಾಲದಲ್ಲೇ ಅಭ್ಯಾಸಕ್ಕೆ ಶುರುಮಾಡುತ್ತಿದ್ದ. ಇದೇ ರೀತಿ ಮಳೆಗಾಲದಲ್ಲೇ ಗೋಲಿ ಆಟ, ಛಳಿಗಾಲದಲ್ಲಿ ಮರಕೋತಿ. ಹೀಗೆ ಅಭ್ಯಾಸಕ್ಕೆ ಶುರು ಹಚ್ಚಿದ್ದ. ನವರಾತ್ರೀಲಿ ಬೊಂಬೆ ಕೂರಿಸಬೇಕಾದರೆ ಶಿವರಾತ್ರೀಲೆ ಇವನು ಬೊಂಬೆಗಳಿಗೆ ಬಣ್ಣ ಕಟ್ಟುಕ್ಕೆ ಆರಂಭಿಸುತ್ತಿದ್ದ.

ಮಯುಸ್ಸಾಗುತ್ತ ಬಂತು ಚಿಗುರುಮೀಸೆ ಗಡ್ಡ ಕೂಡ ಬಂದುವು. ಬೆಳ ಗಾಗುತ್ತಲೂ ಲಕ್ಷಣವಾಗಿ ಕಾಣಿಸಿಕೊಳ್ಳಬೇಕು ಅಂತ ರಾತ್ರಿಯೇ ಮುಖ ಕ್ಷೌರಮಾಡಿಕೊಳ್ಳುತ್ತಿದ್ದ. ಹನ್ನೊಂದು ಗಂಟೆಗೆ ಕಛೇರಿಗೆ ಹೋಗಬೇಕಾದರೆ ಎಂಟು ಗಂಟೆಗೇ ಕ್ರಾಪು ಬಾಚಿಕೊಂಡು ಸಿದ್ಧನಾಗುತ್ತಿದ್ದ. ಆಗಸ ಬಂದು ಬಿಡ್ತಾನೆ, ಕೊಳೆ ಬಟ್ಟೆ ಹಾಕಬೇಕು ಅನ್ನೋ ಆತುರದಲ್ಲಿ ಬೇಗ ಬೇಗ ಕೈಯಾರ ಕೊಳೆ ಮಾಡುತ್ತಿದ್ದ.

ಫಲಕ್ಕೆ ಬಂದವನು ಅಂತ ಹೆಣ್ಣು ಹೆತ್ತವರು ಬಂದು ಇವನನ್ನೂ ಇವನ ಮುಂಜಾಗ್ರತೆಯನ್ನೂ ನೋಡಿ, ನಮ್ಮ ಹುಡುಗೀನ ಕಾಡಿಗೆ ಅಟ್ಟಿದರೂ ಪರ ವಾಗಿಲ್ಲ ಅಂತ ಹಿಂತಿರುಗಿದ್ದರು.

ಇವನ ದೊಡ್ಡಪ್ಪ ಸಖತ್‌ಕಾಯಿಲೆ ಮಲಗಿದ್ದಾಗ. "ಅವರಿಗೆ ಮಕ್ಕಳಿಲ್ಲ ಇವನಾದರೂ ಹೋಗಿ ಸೇವೆ ಮಾಡಲಿ ಅತ ಹೇಗೂ ಐಶ್ವರ್ಯವಂತ. ದುಡ್ಡಿದ್ದ ದೊಡ್ಡಪ್ಪ." ಅಂತ ಇವರಪ್ಪ ಅವರ ಮನೆಗೆ ಕಳಿಸಿದರೆ, ಎಲ್ಲಪ್ಪ ಮುಂಜಾಗ್ರತೆ ಎಂದು ತಲೆಗೆ ಲಪ್ಪಟ್ಟ ಸುತ್ತಿ ಕೊಂಡು ತಡುವು ಉಟ್ಟುಕೊಂಡು ಅಲ್ಲಿಗೆ ಹೋದ. ಇವನ ಅವಲಕ್ಷಣ ಅವಲಕ್ಷಣದ ಮುಖ, ವೇಷ ಎಲ್ಲವನ್ನ ನೋಡಿ, ದೊಡ್ಡಪ್ಪ ಇವನನ್ನು ಮನೆಯಿಂದ ಹೊರಗೆ ಹಾಕಿದ. ತಾನು ಬರೆದಿಟ್ಟಿದ್ದ ಉಯಿಲಿನಲ್ಲಿ ಇವನ ಹೆಸರನ್ನೂ ತೊಡೆದುಹಾಕಿದ.

ಸಂಬಳ ಬಂದ ದಿನ ಅಂದರೆ ಇವನ ಸೊಬಗೇ ಸೊಬಗು. ಲೇ ಅನ್ನುಕ್ಕೆ ಅವಳೇ ಇಲ್ಲದಿದ್ದರೂ, ತೊಟ್ಟಿಲು, ಕುಲಾವಿ ಕೊಳ್ಳುತ್ತಿದ್ದ. ಮುಂದಕ್ಕೆ ಉಪಯೋಗ ಅಂತ ಒಂದು ಬಿಳಿ ಟೋಪಿ, ಒಂದು ಕೇಸರಿ ಟೋಪಿ, ಒಂದು ಕಪ್ಪುಟೋಪಿ ಎಲ್ಲವನ್ನೂ ಕೊಂಡಿಡುತ್ತಿದ್ದ.

ದೇಶಕ್ಕೆ ದೇಶವೇ ಮಳೆ ಇಲ್ಲ ಅಂತ ಕಣ್ಣೀರು ಸುರಿಸುತ್ತಿದ್ದಾಗ, ಈಗ ಮಳೆ ಅಂಗಿ ಕೊಂಡುಕೊಳ್ಳುತ್ತಿದ್ದ.

ಇಷ್ಟು ಮುಂಜಾಗ್ರತಾ ಪ್ರಕೃತಿ ಎಲ್ಲಪ್ಪನಿಗೆ. ಅಗಸನಿಗೆ ಬಟ್ಟೆ ಹಾಕಿದರೆ, ಇವನೇ ಗುಂಡಿಗಳನ್ನೆಲ್ಲಾ ತೆಗೆದು ಇಡುತ್ತಿದ್ದ. ಬಟ್ಟೆ ಬಂದ ದಿನ ತಿರುಗಿ ಗುಂಡಿ ಹಾಕುತ್ತಿದ್ದ.

ಕೆಲಸಕ್ಕೆ ಹೊತ್ತಾಯ್ತು ಅಂತ ಅರೆಬೆಂದ ಅನ್ನ ಉಂಡು, ಬೇಗ ಹೊರಟು ತಪ್ಪು ಬಸ್ಸು ಹತ್ತಿ, ಬೇಗ ತಪ್ಪು ಕಛೇರಿ ತಲುಪಿ, ಕಡೆಗೆ ತನ್ನ ಕಛೇರಿ ಸೇರುವ ಹೊತ್ತಿಗೆ, ಕಾವಲುಗಾರನೂ ಅಲ್ಲಿ ಇರುತ್ತಿರಲಿಲ್ಲ

ಅಂತಹ ಮುಂಜಾಗ್ರತೆ ಏರ್ಪಾಡು ಮಾಡುತ್ತಿದ್ದ ಎಲ್ಲಪ್ಪ. ಮೊನ್ನೆ ಮೊನ್ನೆ ರೈಲು ನಿಲ್ಲುವ ಮೊದಲೇ ತಾನಿಳಿದು, ಹರಹರಾ, ಎನ್ನುವ ಮೊದಲೇ ಗೊಟಕ್ಕಂದ

ಅಯ್ಯೋ! ಪಾಪ! ಅಂತಹ ಶಹಣೆ ಈಗ ಇದ್ದಿದ್ದರೆ ನಮ್ಮ ನೆಹ್ರೂಗೆ ಎಷ್ಟು ಬೆಂಬಲ ಇರುತ್ತಿತ್ತು!!

—ಬಚ್ಚು.

ಸಮತಾ ನೀತಿ

ಪರೀಕ್ಷೆಗಳು ಅಹಿಂಸಾವಾದಿಗಳಿಗೆ ತಕ್ಕುದಲ್ಲ; ಅವು ಒಂದು ರೀತಿಯ ವಿನಾಶೋಪಾಯ. ಸೋತವರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ; ಉಪವಾಸ ಬೀಳುತ್ತಾರೆ; ನಿದ್ದೆ ಕಳೆದುಕೊಳ್ಳುತ್ತಾರೆ; ಕಷ್ಟ ನಷ್ಟಗಳಿಗೀಡಾಗುತ್ತಾರೆ. ಸತಿಯರೆದುರು ಗೌರವ ಕಳೆದುಕೊಳ್ಳುತ್ತಾರೆ ಅದರಲ್ಲೂ, ಇಬ್ಬರು ಕೂತು ಒಬ್ಬ ಗೆದ್ದರೆ, ಗೆದ್ದವನಿಗೂ ಗೆಲವು ಕಡಿಮೆ; ಸೋತವನ ಸಂಕಟ ಹೇಳಿತೀರದು ಒಬ್ಬನ ತಲೆ ಊದುತ್ತೆ; ಮತ್ತೊಬ್ಬನದು ತಗ್ಗುತ್ತೆ. ಸಮತಾವಾದಕ್ಕೆ ಇದು ತೀರ ವಿರೋಧ; ಒಗ್ಗಟ್ಟಿಗೆ ಕುಠಾರ.

ಆದ್ದರಿಂದಲೇ, ಸೋತವರು ಹೂಡುವ ಚಳುವಳಿಗೆ ಗೆದ್ದವರೂ ಸಹಾಯ ಮಾಡುವುದು. ಹೀಗಾಗಿ, ರಾಜೀವಪುರದಲ್ಲಿ ಸೋತವರನ್ನೆಲ್ಲ ಗೆದ್ದವರು ಎಂದು ಮೊದಲೇ ಪರಿಗಣಿಸಿಬಿಡುತ್ತಿದ್ದರು.

ಆದರೆ, ಪರೀಕ್ಷೆಗೆ ಕೂತವರು, ಕೂಡದವರು, ಎಂಬ ಎರಡು ಬಗೆಯವರಿದ್ದಾರೆ. ಸೋತುಬಿಡುತ್ತೇವೆ ಎಂಬ ಅನುಮಾನದಿಂದ ನಾವು ಪರೀಕ್ಷೆಗೆ ಕೂಡಲಿಲ್ಲ, ಅಷ್ಟೆ, ನಮ್ಮನ್ನೂ, ಕೂತಂತೆಯೇ ಪರಿಗಣಿಸಿ, ಗೆದ್ದವರಂತೆಯೇ ಗೌರವಿಸಬೇಕು, ಎಂದು ಅವರೂ ಚಳುವಳಿ ಹೂಡುವುದು ನ್ಯಾಯ. ಹಾಗೆಯೇ ಆಯಿತು, ರಾಜೀವಪುರದಲ್ಲಿ. ಸರಿ! ಅವರೂ ಪಾಸಾದರು.

ಅಲ್ಲಿಗೆ ಮುಗಿಯಲಿಲ್ಲ ಕಥೆ. ಶಾಲೆಗೆ ಸೇರಿದರೆ ಎಂಬ ಒಂದು ಗಂಡಾಂತರ ಇದೆ, ಆದಕ್ಕೆ ಕೂಡ ಬೇಕೋ ಬಿಡಬೇಕೋ ಎಂಬ ಒಂದು ಪ್ರಶ್ನೆ ಮುಂದೆ ಏಳುತ್ತದೆ, ಎಂಬ ಭಯದಿಂದ ಹಲವಾರು ಜನ ಶಾಲೆಯನ್ನು ಬಲು ಬೇಗ ಬಿಟ್ಟುಬಿಡುತ್ತಾರೆ; ಹಲವಾರು ಜನ, ಎಂಥದೇ ಆಗಲಿ, ಎಂದು ನಿಶ್ಚಯಿಸಿ, ಉದ್ದಕ್ಕೂ ಶಾಲೆಗೆ ಹೋಗುತ್ತಲೇ ಇರುತ್ತಾರೆ. ಪರೀಕ್ಷೆಗೆ ಕೂಡದೆ ಇರುವ ಮಂದಿಯಲ್ಲಿ ಈ ಎರಡು ತರಹದವರೂ ಇರುತ್ತಾರೆ. ರಾಜೀವಪುರದಲ್ಲಿ, ಇವರಿಬ್ಬರಿಗೂ ಏನೂ ವ್ಯತ್ಯಾಸಮಾಡುವುದಿಲ್ಲ. ಶಾಲೆಗೆ ಸೇರಿದವರೂ, ಸೇರದವರೂ ಪರೀಕ್ಷೆಗೆ ಕೂತಂತೆಯೇ, ಪರೀಕ್ಷೆಯಲ್ಲಿ ಗೆದ್ದಂತೆಯೆ.

ಶಾಲೆಗೆ ಸೇರದ ಹುಡುಗರಲ್ಲೂ ಎರಡು ತರಹದವರುಂಟು. ಒಂದು ಊರಲ್ಲೇ ತಿರುಗಾಡಿಕೊಂಡು ಹಾಯಾಗಿ ಚಿನ್ನಿಕೋಲು ಆಡುವವರು, ಮತ್ತೊಂದು, ಊರಲ್ಲಿ ಗೆದ್ದರೆ ಗೋಳು, ಶಾಲೆ ಎಂಬ ಒಂದು ಕಾರಾಗೃಹ ಕಾದಿರುತ್ತದೆ ಒಳಗೆ ಎಳೆದುಕೊಳ್ಳೋದಕ್ಕೆ, ಎಂದು ಚಿಂತಿಸಿ, ಊರಲ್ಲೊಬ್ಬರ ಮನೆಯಲ್ಲು ಹುಟ್ಟದೆ ಇರುವವರು. ರಾಜೀವಪುರದಲ್ಲಿ, ಇವರಿಬ್ಬರಿಗೂ ಒಂದೇ ನ್ಯಾಯ. ಹುಟ್ಟದ ಮಕ್ಕಳು ಹುಟ್ಟಿದಂತೆಯೇ, ಶಾಲೆ ಸೇರಿದಂತೆಯೇ, ಪರೀಕ್ಷೆಗೆ ಕೂತಂತೆಯೇ, ಕೂತು ಗೆದ್ದಂತೆಯೆ.

ಸಮತಾ ನೀತಿ ಎಂದರೆ, ನಮ್ಮ ರಾಜೀವಪುರದ್ದು.

ಗೋಪಾಲಯ್ಯನ ಗೋಣು

"ಅವನ ಜಾಯಮಾನವೇ ಹಾಗೆ... ಈ ಜನ್ಮದಲ್ಲಿ ಅವನಿಗೆ ಲಗ್ನವಿಲ್ಲ—ಜಾತಕವಾದರೂ ಬದಲಾಯಿಸಿ ನೋಡಬೇಕು...." ಎಂದು ಎಂಟನೇ ಹೆಣ್ಣು ಬಂದಾಗ ಬೇಡವೆಂದು ಗೋಣು ಆಡಿಸಿದ ಗೋಪಾಲಯ್ಯನನ್ನು ಕಂಡು ಪುಟ್ರಂಗು ಹೇಳಿದ. ಹೇಗಾದರೂ ಮಾಡಿ ಈ ಲಗ್ನ ಮಾಸದಲ್ಲೇ ಅವನಿಗೊಂದು ಹೆಣ್ಣು ಗಂಟ್ಹಾಗಬೇಕೆಂದು ಪುಟ್ರಂಗುವಿನ ಸಂಕಲ್ಪ. ಗೋಪಾಲಯ್ಯನಿಗೋ ತನ್ನ ಡೈರಿಯಲ್ಲಿ ಬರೆದುಕೊಂಡ ರೂಪಲಕ್ಷಣಗಳಿರುವ ಕನ್ಯೆ ಕರೆಯುವವರೆಗೆ ಕೈ ಎತ್ತಿ ತಾಳಿ ಕಟ್ಟ ಕೂಡದೆಂಬ ಬೆಪ್ಪು ಬಯಕೆ. "ಹೂಂ—ಬೆಪ್ಪು ಬಯಕೆಯಲ್ಲದೆ ಮತ್ತೇನು? ಸಂಗೀತ ಬಲ್ಲ ಎಷ್ಟು ಜನ ಹೆಂಡಂದಿರು ತಂಬೂರಿ ಹಿಡಿದು ಮೂರು ನುಡಿ ಗಂಡಂದಿರೆದುರಿಗೆ ಗೊಣಗಿದ್ದಾರೆ? ಹೆಣ್ಣು ಪರೀಕ್ಷೆಯ ಪೂರ್ತಿ ಹಾರ್ಮೋನಿಯ ಹರಡಿಕೊಂಡು ಹಾಡಿದ ಹೆಣ್ಣುಗಳನ್ನು ನಾವು ಕಾಣೆವೆ? ಇದೆಲ್ಲಾ ನಿನ್ನ ಕಾಮಿನಿ ಶಂಖಿನಿ ಲಂಬಿಣಿ ಜಾತಿ ಲಕ್ಷಣಗಳ ಪರಿಶೀಲನೆ ಕೇವಲ ಮರೀಚಿಕೆಯ ಬೆನ್ನು ಬಿದ್ದ ಮಂಗನಹಾಗಯ್ಯ" ಎಂದು ಪುಟ್ರಂಗು ಸಾರಿ ಸಾರಿ ಹೇಳಿದ. ಗೋಪಾಲಯ್ಯ ಕೇಳಬೇಕಲ್ಲಾ ಹಾಳು ಮನುಷ್ಯ ಒಂದು ವರಸೆ ಗೋಣು ಹಾಕುವುದರಲ್ಲಿ ಕಟ್ಟಿದ ಗೋಪುರ ಹುಟ್ಟಿದ ಆಶಾಭಾವನೆ ಕಳಚಿ ನುಚ್ಚು ನೂರು ಮಾಡಿಬಿಡುವ ಮಹಾರಾಯ "ಉಹೂಂ" ಎಂದು ತಲೆ ಆಡಿಸಿದರೆ ಬ್ರಹ್ಮ ಬಂದರೂ "ಹೂಂ" ಎಂದೆನ್ನಿಸಲಾಗದ ವೊಂದು ಜಾತಿ ಪ್ರಾಣಿ ಅವ. "ನನಗೇನು ಈಗ ಆಗಿರೋ ವಯಸ್ಸು....ಮಹಾ.... ಈಗೇನು ಆತುರ" ಎಂದು ಬಿಡುವ. ಒಂದು ಲಗ್ನ ಮಾಸ ಕಳೆದರೆ ಮತ್ತೊಂದು ಮುದಿ ನೆರಿಗೆಗೆ ಅವಕಾಶಕೊಟ್ಟ ಹಾಗಾಗುತ್ತದಲ್ಲಾ....ಅವನ ಕೆನ್ನೆಗೆ ಇನ್ನೆರಡು ನೆರಿಗೆ ಸೇರಿದರೆ ಖಂಡಿತ ಯಾವ ಹೆಣ್ಣೂ ಅವನ ತಾಳಿಗೆ ಗೋಣು ಬಗ್ಗಿಸದೆಂದು ಪುಟ್ರಂಗುವಿಗೆ ಗೊತ್ತಿತ್ತು. "ನಿಜಕ್ಕೂ ಗೋಪಾಲನಿಗೆ ಇಪ್ಪತ್ತು ಆರಾದರೂ ಮೂವತ್ತೆರಡರ ಕಳೆ ಆ ಮೂತಿ ಮೇಲೆ" ಎಂದು ಪುಟ್ರಂಗು ಪೇಚಾಡಿದ್ದುಂಟು.

ಗೋಪಾಲಯ್ಯ ಭಾವನಾ ಜೀವಿ. ಆದರ್ಶಮಯ ಜೀವನ ನಡೆಸಬೇಕೆಂದು ಸಂಕಲ್ಪಿಸಿದವ. ಅವನ ದೊಡ್ಡ ಕೊರತೆ ಎಂದರೆ ಅವನಿಗೆ ವಿದ್ಯಾ

ಬರೆಯುವ ಖಾಯಿಲೆ. ಮೊದಲು ಚೆನ್ನಾಗೇ ಇತ್ತಂತೆ. ಪುಟ್ರಂಗೂ ಜೊತೆಗೆ ಮದರಾಸಿಗೆ ಹೋಗಿದ್ದಾಗ ಅಲ್ಲಿಯ ಸಂಜೆಯ ಕಡಲ ದಡದ ಸೊಗಸು ಕಂಡಂದಿನಿಂದ ಈ ಪದ್ಯದ ಖಾಯಿಲೆ ತಗುಲಿಕೊಂಡಿತಂತೆ. ಅವತ್ತಿನಿಂದ ಮನುಷ್ಯ ಎರ್ರಾಬಿರ್ರಿ ಅಡಕೊಡಗಿದನಂತೆ. ಚಿಕ್ಕವನಿದ್ದಾಗಲೂ ಒಂದೆರಡು ಪದ್ಯ ಬರೆದುದ್ದುಂಟೆಂದು ಪುಟ್ರಂಗ-ವೇ ಹೇಳಿದ್ದ. "ಒಳಗೇ ಹುದುಗಿದ್ದ ಈ ಪ್ರತಿಭೆ ಒಮ್ಮೆಲೇ ಚಿಮ್ಮ ಕಾರಂಜಿಯಾಗಲು ಮದರಾಸಿನ ಕಡಲ ದಡ ಇಂಬು ಕೊಟ್ಟೇ ಬಿಟ್ಟಿತು" ಎಂದು ನಿಟ್ಟುಸಿರು ಬಿಟ್ಟು ಹೇಳಿದ ಪುಟ್ರಂಗು. ದೊಡ್ಡ ಗಾಜಿನ ಕನ್ನಡಕ ಬಂತು. ಷೇರ್ವಾನಿ ಹೊಲಿಸಿದ ಲಕ್ಮ ಪುಸ್ತಕಪಾಣಿಯಾದ. ಉದ್ದನೆಯ ಪಟ್ಟೆ ಕ್ರಾಪನ್ನು ತೀಡಿ ಹಿಂದಕ್ಕೆ ಬಾಚಿದ. ಗಂಭೀರ ನಡಿಗೆ ಬಂತು. ಸಾಕ್ಷಾತ್ ಸಿನಿಮಾದಲ್ಲಿ ಬರುವ ಕವಿಯ ಲಕ್ಷಣಗಳೆಲ್ಲಾ ಮೂಡಿ ಬಂದವು. ಚಡಾವು ಧರಿಸಿ ನಮ್ಮ ಬೀದಿಗೆ ಬಂದ ಇವನನ್ನು ಕಂಡ ನಮ್ಮ ಬೀದಿಯ ಕಿಲಾಡಿ ಹುಡುಗರು "ಶೀನಾರಿಗಾದೆಯೋ ಎಲೆ ಮಾನವಾ?" ಎಂದು ಕೇಳಿದ್ದರು. ಗೋಪಾಲಯ್ಯ ಎಲ್ಲರಂತೆ ಕಂಪನಿ ಕೆಲಸವೋ—ಮಾಸ್ತರಗಿರಿಯೋ ಮಾಡಿ ಹೆಣ್ಣೊಂದರ ಕೈ ಹಿಡಿದು ಹತ್ತು ಮಂದಿಯಂತೆ ಅವನ "ತಾಪತ್ರಯ—ಅಕ್ಕಿ ಸಾಲದು—" ಎಂದೋ "ಹೆಂಡತಿಗೆ ಹೊಟ್ಟೆ ಶೂಲೆ—ಮಗುವಿಗೆ ನಾಯಿಕೆಮ್ಮು" ಎಂದೋ ತೊಂದರೆಪಡುತ್ತಾ ಇರುವನೆಂದು ನಂಬಿದೆವು. ಆದರೆ ಅವನ ಜಾಡೇ ಬೇರೆಯಾಯಿತು. "ಈ ಪದ್ಯ ಬರೆಯುವ ಹಂಬಲವೇ ಅವನಿಗೆ ಹೆಣ್ಣು ಹೊಂಡುವ ಕಾಲದಲ್ಲಿ ಹುಚ್ಚಾಗಿ ಪರಿಣಮಿಸಿತು" ಎಂದು ಪುಟ್ರಂಗು ಪೇಚಾಡಿದ. ಯಾವ ಹೆಣ್ಣು ಬಂದರೂ....ಹೆಣ್ಣು ಚಾಪೆ ಮೇಲೆ ಕೂಡುತ್ತಲೆ—ಒಳ ಜೇಬಿಗೆ ಕೈಹಾಕಿ ಪುಟ್ಟ ಪುಸ್ತಕ ಹೊರತೆಗೆದು ಅದನ್ನೂ ಹೆಣ್ಣನ್ನೂ ಅನೇಕಬಾರಿ ಅವಲೋಕಿಸಿ ಅವನ ಗೋಣು ಏನು ಹೇಳುವುದೋ ಎಂದು ಕಾದು ಕೂಡುವುದು ಪುಟ್ರಂಗುವಿನ ಕೆಲಸ. ಗೋಣು "ಉಹು" ಎಂದು ನಕಾರ ಹೇಳದೆ ಇರಲೆಂದು ವೆಂಕಟರಮಣನಿಗೆ ಸಹಾ ಹರಕೆ ಹೊರುತ್ತಿದ್ದ ಪುಟ್ರಂಗು. ಆದರೇನು ಆ ಸೋಡಾಬಾಟ್ಲಿ ತಳದ ಕನ್ನಡಕದಲ್ಲಿ ತೂರಿ ಬಂದ ಈ ಭಾವನಾ ಜೀವಿಯ ತೀಕ್ಷ್ಣ ದೃಷ್ಟಿ ಮಹಾ ಹರಿತವಾದದ್ದು. ಇದುವರೆಗೂ ನಕಾರವೇ ಹೊರ ಹೊರಟಿದ್ದುವು

ಶಿಕಾರಿಪುರದ ಹೆಣ್ಣು ಬಂದಿತು. ಈ ಶಿಕಾರಿಯಲ್ಲಿ ಗೋಪಾಲಯ್ಯನ ಗೋಣಿನಿಂದ ನಕಾರ ಹಾಕಿಸಕೂಡದೆಂದು ಪುಟ್ರಂಗು ಬಹಳ ಪ್ರಯಾಸ ಪಟ್ಟಿದ್ದ. ಮಲೆನಾಡ ಕಡೆ ಹುಡುಗಿ ಎಸೂಳಾಗಿ ಬೆಳ್ಳಗಿತ್ತು. ದೊಡ್ಡ ಮೂಗು ಪುಟ್ಟ ಬಾಯಿ ಮಾಟವಾದ ಪುಟ್ಟ ಬಾಯಿ. ಜಿಲೇಬಿ ತುರುಬು. ಮುದುಡಿ ಬಾಗಿ ಕುಳಿತಿದ್ದ ಗೂನು ಬೆನ್ನಿನ ಐಬು ಕಾಣುತ್ತಿರಲಿಲ್ಲ. ಆದರೂ ಮನೆ ತಪಸ್ತಕ ಹೆಣ್ಣು—ಕಪ್ಪಿದ್ದರೂ ಕಳೆಯಿತ್ತು—ಕುಳ್ಳಾದರೂ ಕಳ್ಳೆಯಲ್ಲ—ಕಾಲು

ಕೊಂಚ ಐಬೆಂದು ಆಗದವರು ಅನ್ನುತ್ತಿದ್ದರು. ಬಹಳ ವಿಮರ್ಶಕ ದೃಷ್ಟಿಯಿಂದ ನೋಡಿದ್ದರೆ ಐಬು ಕಾಣುತ್ತಿತ್ತೇನೋ. "ಇದೇನು ಕುದುರೆ ವ್ಯಾಪಾರವೆ ?—ಪುನೀತನ—ಕೆಲಸವಂತೆ – ಅಡಿಗೆ ಸೊಗಸಾಗಿ ಮಾಡುತ್ತಾಳೆ" ಎಂದು ಪುಟ್ರಂಗು ಶಂಖ ಹೊಡೆದ. ನಮ್ಮ ಕವಿರಾಯ ಕೇಳಬೇಕಲ್ಲಾ. ಇನ್ನೇನು ಗೋಣು ಅಡಿಸಿ ಬಿಡುವುದರಲ್ಲಿದ್ದ. ಅಷ್ಟರಲ್ಲಿ ಪುಟ್ರಂಗು ಕನ್ನಡಿ ಮುಂದೆ ಹಿಡಿದ. ಗೋಪಾಲಯ್ಯ ತನ್ನ ಮುಖನೋಡಿಕೊಂಡ. "ಈ ಲಗ್ನ ಬಿಟ್ಟರೆ ಇನ್ನು ಎರಡು ನೆರಿಗೆ ಹಣೇ ಮೇಲೆ ಮೂಡುತ್ತೆ ಮಗು—ಈ ಛಾನ್ಸು ಬಿಡಬೇಡ ಈಸಾರಿ ನೀನು ನಕಾರದ ಗೋಣು ಒಗೆದೆಯೋ ಇನ್ನು ನಿನಗೆ ಹೆಣ್ಣೇ ಬರುವುದಿಲ್ಲ....ಮದುವೆಯಾದರೂ ಅವರನ್ನು ಸಾಕಬೇಕಲ್ಲಾ ಅನ್ನೊ ಚಿಂತೆ ಬರುತ್ತೆ—ಹೇಗಾದರೂ ಕೆಲಸ ಹುಡುಕುವೆ—ಆ ಮೇಲೆ ಡಾಕ್ಟ್ರು—ಔಷಧಿ—ಬಟ್ಟೆ ಬರೆಗಳ ತಾಪತ್ರಯ ತಾನೇ ಬರುತ್ತೇ ನೀನೂ ಒಬ್ಬ ಮನುಷ್ಯನಾಗುತ್ತೀಯ. ಈ ತಾಪತ್ರಯಗಳು ಬಂದಕೂಡಲೇ ಈ ಪದ್ಯಾ ಬರೆಯುವ ಖಾಯಿಲೆ ತಾನೇ ತಾನಾಗಿ ಗುಣಮುಖವಾಗುತ್ತದೆ" ಎಂದು ಕಿವಿಯಲ್ಲಿ ಪುಟ್ರಂಗು ಒಂದೇ ಸಮ ಒರಲಿದ. ಗೋಪಾಲಯ್ಯ ಒಮ್ಮೆಲೇ 'ಹೂಂ' ಎಂದು ಗೋಣು ಒಗೆದು ಬಿಟ್ಟ. ಪುಟ್ರಂಗು ಕೇಕೆ ಹೊಡೆದ ಹೆಣ್ಣು ಕರೆತಂದವರು ಹಿಗ್ಗಿಹೋದರು. ಹೆಣ್ಣು ಮಾತ್ರ ಕುಗ್ಗಿ ಕೂತೇ ಇತ್ತು.

ಗೋಪಾಲಯ್ಯನ ಬೆನ್ನು ತಟ್ಟಿ ಒಳಗೆ ಅಟ್ಟಿ ಹೆಣ್ಣಿನ ಕಡೆಯವರೊಡನೆ ಮುಂದಿನ ಲಗ್ನದ ಮುಹೂರ್ತ, ಮ್ಯಾಳದವ, ಮಾಂಗಲ್ಯದ ಖರ್ಚು, ವೇಶವಳಿಗೆ ಉಂಟೆ ಇಲ್ಲವೇ ? ಎಂಬ ವಿಷಯ ಚರ್ಚಿಸಿ ಲಗ್ನಪತ್ರಿಕೆ ಬರೆಸಿಬಿಟ್ಟರೆ ಎಲ್ಲಾ ಆದಹಾಗಾಯಿತೆಂದು ಪುಟ್ರಂಗು ಇನ್ನೇನು ಕೈ ಕೊಡವಿಕೊಂಡೇ ಬಿಟ್ಟ.

ಗೋಪಾಲ ಎಲ್ಲಿ ಸೂಟಿನ ಬದಲು ಕವಿ ಶೇರುವಾನಿ ಹೊಲಸಿಬಿಡುವನೋ ಎಂದು ದಿಗಿಲುಗೊಂಡ ಪುಟ್ರಂಗು ಟೈಲರ್ ಸಿದ್ದೋಜಿಗೆ ಶೇರುವಾನಿ-ಅಳತೆಯೋ ತೊಗೊಂಡು ಸೂಟನ್ನೇ ಹೊಲೆಯುವಂತೆ ಹೇಳಿದ.

ಆದರೆ ಮರುದಿನದ ಹೊತ್ತಿಗೆ ರಂಗೇ ಬದಲಾಯಿತು ಗೋಪಾಲಯ್ಯ ಮಂಗನಾದ. ಪುಟ್ರಂಗು ಸುಸ್ತು. ಶಿಕಾರಿಪುರದ ಹುಡುಗಿ ಅಪ್ಪ ಜೋಲು ಮೋರೆ ಹಾಕಿ ಬಂದ. ಕೈ ಆಡಿಸಿ ತಲೆ ಮೇಲೆ ಕೈ ಹೊತ್ತ. "ಏನು ವಿಷಯ" ಎಂದು ಪುಟ್ರಂಗು ಪೆಚ್ಚಾಗಿ ಕೇಳಿದ. "ಲಭ್ಯವಿಲ್ಲ ಸ್ವಾಮಿ ಹುಡುಗಿ ಒಪ್ಪಲಿಲ್ಲ ಹುಡುಗನ್ನ........" ಎಂದು ಹೇಳಿಬಿಟ್ಟರು. ಗೋಪಾಲನಿಗೆ ಚಿತ್ರ ವಿಚಿತ್ರವಾಯಿತು ಕಾಗದದ ಕಂತೆ ಹರಡಿ "ಹಜಾಮರ ಸಂತೆಯಲ್ಲಿ ಹಗಲು ದರೋಡೆ" ಎಂಬ ಪ್ರಗತಿ ಕವನ ಪ್ರಾರಂಭಿಸಿದ

ಇನ್ನೇನು ಹಡಕ್ಕೆ ಬಂದ ಎಂದು ಯೋಚಿಸಿ ಗೋಪಾಲನಿಗೆ ಮತ್ತೆ ಹಳೆಯ ಖಾಯಿಲೆ ಮರುಕಳಿಸಿದ್ದಕ್ಕೆ ಪುಟ್ರಂಗು ಪುಟ ಎದ್ದ ಚೆಂಡಿನಂತೆ ಪಡಸಾಲೆಯ ತುಂಬಾ ಪರದಾಡಿದ. ಗೋಪಾಳಿ ಗೊಣಗತೊಡಗಿದ "........ಈ ಹಿಂದೆ ಬಂದು ನೆಂಟತನ ಬಯಸಿದ ಹೆಣ್ಣುಗಳಿಗೆ ಬೇಡವೆಂದು ಗೋಣು ಅಡಿಸಿದ್ದೇಕೆ ಗೊತ್ತೆ?....ಅವೆಲ್ಲಾ ಸುಮಾರಾದ ಚೆಂದುಳ್ಳ ಹೆಣ್ಣುಗಳು. ನಾನು ಒಪ್ಪಿದ ಮೇಲೆ ಅವು ಖಂಡಿತಾ ಒಲ್ಲೆವೆಂದು ಓಡಿಹೋಗುವುದೆಂದು ನಾನೇ ಮೊದಲು "ಉಹೂಂ" ಎಂದು ಗಂಡಿನ ಹೆಮ್ಮೆ ಕಾಯ್ದು ಕೊಂಡಿದ್ದೆ....ಆದರೆ ಪುಟ್ರಂಗೂ ಈ ಶಿಕಾರಿಪುರದ ಹೆಣ್ಣು ಹೀಗೆ ಮಾಡುತ್ತೆಂದು ನಾನು ಎಣಿಸಿರಲಿಲ್ಲ. ಆಗೂನು ಬೆನ್ನು ಉದ್ದ ನಾಶಿಕಕ್ಕೆ ಈ ಗೂಬೆಗಣ್ಣು ಬೋಳು ತಲೆಯೇ ಸರಿ ಅದಕ್ಕೂ ಗಂಡು ಸಿಗದೆ ನನ್ನ ಹುಡುಕಿ ಬಂದರೆ ನಾನು ಒಪ್ಪಿದರೆ ಆಯಿತೆಂದು 'ಹೂಂ' ಎಂದು ಗೋಣುಹಾಕಿದೆ....ಆದರೆ ಶಿಕಾರಿಗೆ ಸಿಗದೆ ಎದುರುಬಿತ್ತು" ಎಂದು ನಿಟ್ಟುಸಿರು ಹೊರಹೊಮ್ಮಿಸಿ ಕಂತೆ ಕಾಗದ ಹೊತ್ತು ಅಂದೇ "ಕವಿಯ ಸೋಲು" ಎಂಬ ಗದ್ಯಪದ್ಯದ ಉದ್ಗ್ರಂಥ ಬರೆಯಲು ಪ್ರಾರಂಭಿಸಿಬಿಟ್ಟ.

ಗೋಪಾಲನೂ ಬಿದ್ದ....ಪುಟ್ರಂಗು ಪೆಚ್ಚಾದ "ವರ್ಷ ನಲ್ವತ್ತಾಯ್ತು ಇನ್ನೆಲ್ಲಿ ಹೆಣ್ಣೆನಗೆ....ಗೋಪಾಲನಲ್ಲ ಗಣೇಶನೇ ಸರಿನಾನು...." ಎಂದು ಅವನ ಕವಿಯ ಸೋಲಿನ ಕಡೆ ಚರಣ ಹೇಳುತ್ತಿತ್ತು. ಗೋಪಾಲನ ನೆರಿಗೆಗಳೇರಿ ಬರುತ್ತಿದ್ದರೂ ಪುಟ್ರಂಗು ಮಾತ್ರ ಹುಡುಕುತ್ತಲೇ ಇದ್ದಾನೆ. ನೋಡಬೇಕು ಗೋಪಾಲನ ಕೈಯ್ಯ ಕರಿಮಣಿ ಸರಕ್ಕೆ ಯಾವಾಕೆಯ ಗೋಣುಕಾದಿದೆಯೋ....?

—ದಾಶರಥಿ ದೀಕ್ಷಿತ್.

ಮಣ್ಣ ಗೊಂಬೆಯಮಾಡಿ, ಬಣ್ಣದುಡಿಗೆಯ ತೊಡಿಸಿ, ಮನೆ ಮನೆಯಲ್ಲೂ ಮುಂದಿ ಮುಂದಿಡುವರು, ನೋಡಾ! ಮಣ್ಣಗೊಂಬೆಯನೆತ್ತಿ ಬಣ್ಣ ನುಡಿಯಲು ಕಲಿಸಿ ಎತ್ತೆತ್ತಲೂ ಸುತ್ತಿ ಮೆರೆಸುವರು, ನೋಡಾ! ನಾವು ತೋಡಿದ ಕೆಸರು, ನಾವು ಬಡಿಸಿದ ಮೊಸರನುಣ್ಣುತಿದೆ, ನೋಡಾ! ಬೆವರು ಬೆರೆಸಿಕೊಟ್ಟ ರೂಪು ನೆತ್ತರೆರೆದು ಬಳಿದ ನಾಮ, ಕೊಸರಿಗಿಂಕ್ರಿ ಉಳಿಯದುಣಿಸಿದುಸಿರು. ಎಲ್ಲವೊಂದು ಮೂರ್ತಿಯಾಗಿ ಕೀರ್ತಿಶಿಖರವೇರಿ ನಿಂತು ನಮ್ಮ ಹಳಹಳಿಯುತಿದೆ, ನೋಡಾ! ಕಣ್ಣ ಕುಕ್ಕುತಿದೆ, ಮಣ್ಣ ಮುಕ್ಕುತಿದೆ, ಹಾಲೊಳಗದ್ದಿದ್ದ ನೀರೊಳಗದ್ದುವ ಕಾಲ ಸನಿಯವೇ ಬರ್ಪುದು. ಹೇಳಿದಳು, ನಮ್ಮ ಕೊರವಂಜಿ ಕಾಯುವಪರಂಜಿದೇವಿ.

ನಂಬಿಕೆಗೆ ಅರ್ಹತೆ!

★ ಅತ್ಯುತ್ತಮ ಟಾಯಿಲೆಟ್ ಸಾಬೂನಿನಲ್ಲಿ

★ ನೀವು ಏನೇನು ಗುಣಗಳನ್ನು

★ ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವುವು ಎಂದು ಖಚಿತವಾಗಿ ಹೇಳುತ್ತೇವೆ.

★

—: ಎಲ್ಲಾ ಕಡೆಗಳಲ್ಲೂ ದೊರಕುವುದು :—

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಜೈ

★ ಮಹಾಕಾಳಿ ★



ಭೂಮಿಕೆ: ನಿರೂಪರಾಯ್—ಸಾಹುಮೋಡಕ್

ಲಲಿತಾಪವಾರ್—ಉಲ್ಲಾಸ್—ವಿಮಲಾ.

G F. D. RELEASE

ಕೊರವಂಜಿ

ಬಳೇಪೇಟೆ : : ಬೆಂಗಳೂರು 2

ಬಿಡಿ ಪ್ರತಿ ಕೇವಲ ನಾಲ್ಕಾಣೆ

ವಾರ್ಷಿಕ ಚಂದಾ: ಕೇವಲ 3 ರೂ.ಗಳು (ಅಂಚೆ ವೆಚ್ಚ ಸಹಿತ)

ನಮ್ಮ ಹೊಸ ಮಾರಾಟಗಾರರು:

Sri H. R. SRINIVASAN,
HOLALKERE.

Sri F. S. SOPPI,
ALNAWAR.

Sri H. S. SURYANARAYANA,
JOURNALIST, KADUR.

ಹೌದು ! ನಿಮಗೆ ಚಿಂತೆ ಬೇಡ....

ದಿನ ಬೆಳಗಾದರೆ ಇದೊಂದು ಚಿಂತೆ; ನೂರಾರು ರೂಪಾಯಿಗಳು ವೆಚ್ಚ
ವಾಯಿತು. ಹಲ್ಲಿನ ವ್ಯಾಧಿ ಮಾತ್ರ ಹೋಗಲಿಲ್ಲ....... ಅದಕ್ಕಾಗಿ
ಹಲ್ಲನ್ನು ಕೀಳಿಸುವುದೇ....... ಬೇಡ....... ಬೇಡ.......!!!



ಯೋಗಿಯವರ ಡಾಕ್ಟರ್ ಹಲ್ಲುಪುಡಿಯನ್ನೇ ಉಪಯೋಗಿಸಿ

ಇದರಿಂದ ನಿಮ್ಮ ಅಗಾಧ ಚಿಂತೆ ತೊಲಗೀತು !
ಪುರಾತನ ಕಾಲದ ಆಯುರ್ವೇದ ರೀತಿಯಿಂದ ತಯಾರಿಸಿದುದು.

ಹಂಚಿಕೆಗಾರರು: **ದಲ್ವಾನಿ ಸ್ಟೋರ್ಸ್**
173, ನಗರ್ತರಪೇಟೆ, ಬೆಂಗಳೂರು ಸಿಟಿ

ಪ್ರತಿನಿಧಿಸಲ್ಪಡದ ಕ್ಷೇತ್ರಗಳಲ್ಲಿ ಏಜಂಟರುಗಳು ಬೇಕಾಗಿದ್ದಾರೆ.

ಈ ದಿನವೇ ನೋಡಿ!


ಬೆಂಗಳೂರು :

ಗೀತಾ
(ತೆಲುಗು)

ರೂಪಮಹಲ್
(ತಮಿಳು)

ಮೈಸೂರು :

ಪ್ರಭುದೇವ್
(ತಮಿಳು)



వినోదా వారి

స్త్రీ సాహసం

అంజలి..నాగేశ్వరరావు..సూర్యప్రభ..సి.యస్.ఆర్..శివరావు..రేలంగి
గిరిజ..రామస్వామి..సీతారాం..సి.వరలక్ష్మి..

దర్శకత్వం...వేదాంతం రాఘవయ్య
రచన, పర్యవేక్షణ... సముద్రాల....

AN AMRIT RELEASE

ಶೀಘ್ರದಲ್ಲಿಯೇ

ಪ್ರದರ್ಶನವಾಗಲಿರುವ ತಾರೀಖನ್ನು ಗಮನಿಸಿ!



ಜ್ಞಾನಾಂಬಿಕಾ ಪಿಕ್ಚರ್ಸ್‌ರವರ

ಮಂತ್ರದಂಡಂ (ತೆಲುಗು)

ನಾಗೇಶ್ವರ ರಾವ್, ಜಯಮ್ಮ, ಶ್ರೀರಂಜಿನಿ (ಜ್ಯೂ.)

ಬಾಲಸರಸ್ವತಿ, ಶಿವರಾವ್, ಮುಂತಾದವರ ಅಭಿನಯ

A TALLAM RELEASE

Printed by B S Iyengar, Bangalore City
Publisher—B N Gupta Editor—M. Sivaram